# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಸಂಪುಟ:02 • ಸಂಚಿಕೆ: 27 • ನೋಂದಣಿ ಸಂ.:KARKAN27911 • ವಿಜಯನಗರ • 21.07.2024 • ಭಾನುವಾರ • ಪುಟ:04 • ಬೆಲೆ:2
Volume:02 • Issue: 27 • Reg.No:KARKAN27911 • VIJAYANAGARA • 21.07.2024 • Sunday • Page:04 • Rs:2



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ
No.1 Leading in Local News Paper
80,000
HAMPI TIMES E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201


## ತುಂಗಭದ್ರಾ ನದಿಪಾತ್ರದ ಜನರಿಗೆ ಎಚ್ಚರಿಕೆ

**ಹಂಪಿ ಟೈಮ್ಸ್ ಹೊಸಪೇಟೆ**

ತುಂಗಭದ್ರಾ ಜಲಾಶಯದ ನೀರಿನಮಟ್ಟ ಶನಿವಾರ ಬೆಳಿಗ್ಗೆ 8ಕ್ಕೆ 65.110 ಟಿಎಂಸಿ ಸಾಮರ್ಥ್ಯದೊಂದಿಗೆ 1621.32 ಅಡಿಗೆ ತಲುಪಿದೆ. ತುಂಗಭದ್ರಾ ಜಲಾಶಯಕ್ಕೆ ಪ್ರಸ್ತುತ ಒಳಹರಿವು ಸುಮಾರು 1,07,198 ಕ್ಯೂಸೆಕ್ ಗಳಷ್ಟಿದೆ. ಜಲಾನಯನ ಪ್ರದೇಶದಲ್ಲಿ ಮಳೆಯಾಗುತಿದ್ದು, ಜಲಾಶಯಕ್ಕೆ ಒಳಹರಿವಿನ ಆಧಾರದ ಮೇಲೆ ಹೆಚ್ಚುವರಿ ನೀರನ್ನು ಯಾವುದೇ ಕ್ಷಣದಲ್ಲಿ ನದಿಗೆ ಬಿಡಲಾಗುವುದು. ತುಂಗಭದ್ರಾ ನದಿಯ ಅಕ್ಕಪಕ್ಕದ ಗ್ರಾಮಗಳಲ್ಲಿರುವ ಎಲ್ಲಾ ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ತಿಳಿಸಲು, ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಟಿ.ಬಿ.ಬೋರ್ಡ್ ತಿಳಿಸಿದೆ.


AADI BAJAJ
JOB Vacancies
HOSAPETE
1) Sales Executive
2) Spare Parts Incharge
3) Computer Coperater
Qualification
ITI or Diploma in Automobile or Mechanical Preferred or Any Degree. Experienced in Two Wheeler Industries preferred
Contact
9731361414
E-mail:
aadibajajhospet@gmail.com


# ಮಕ್ಕಳಿಗೆ ಎಟಿಎಂ ಆಗದಿರಿ ಸಂಸ್ಕಾರ ನೀಡಿ

### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸಲಹೆ । ಕಂದಾಯ ದಿನಾಚರಣೆ, ಪ್ರತಿಭಾ ಪುರಸ್ಕಾರ ಹಾಗೂ ಕಾರ್ಯಾಗಾರ

### ಕೆಲಸದ ಜೊತೆಗೆ ಆರೋಗ್ಯದತ್ತ ಗಮನ ಹರಿಸಿ, ಕುಟುಂಬವನ್ನು ನಿರ್ಲಕ್ಷ್ಯಿಸಬೇಡಿ । ಪಾಲಕರ ಜವಾಬ್ದಾರಿ ಅರಿಯಿರಿ

**ಹಂಪಿ ಟೈಮ್ಸ್ ಹೊಸಪೇಟೆ**

ಗ್ರಾಮಮಟ್ಟದಲ್ಲಿ ಕಾರ್ಯನಿರ್ವಹಿಸುವ ಗ್ರಾಮ ಆಡಳಿತ ಅಧಿಕಾರಿಗಳು ತಾಳ್ಮೆ, ಸಹನೆಯಿಂದ ಇರಬೇಕು. ಜನರ ನೋವು ನಲಿವಿಗೆ ಸ್ಪಂದನೆ ನೀಡಬೇಕು. ಮುಖ್ಯವಾಗಿ ಸಾರ್ವಜನಿಕರು ನಮ್ಮನ್ನು ನೋಡುವ ದೃಷ್ಟಿಕೋನ ಸರಿಯಾಗಿರುವಂತೆ ಉತ್ತಮವಾಗಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಕರ್ನಾಟಕ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಕೇಂದ್ರ ಸಂಘ ದಾವಣಗೆರೆ, ಜಿಲ್ಲಾ ಘಟಕ ವಿಜಯನಗರ, ಕಂದಾಯ ನೌಕರರು ಹಾಗೂ ಗ್ರಾಮ ಸಹಾಯಕರ ಸಹಯೋಗದೊಂದಿಗೆ ನಗರದ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಕಂದಾಯ ದಿನಾಚರಣೆ, ಪ್ರತಿಭಾ ಪುರಸ್ಕಾರ ಹಾಗೂ ಕಾರ್ಯಾಗಾರಕ್ಕೆ ಜಿಲ್ಲಾಧಿಕಾರಿಗಳು ಚಾಲನೆ ನೀಡಿ ಮಾತನಾಡಿದರು.

ಅಧಿಕಾರಿಗಳು ಕೆಲಸದ ಜೊತೆಗೆ ಆರೋಗ್ಯದ ಕಡೆಗೆ ಗಮನ ಕೊಡಬೇಕು. ಅತಿಯಾದ ಒತ್ತಡದಲ್ಲಿ ಕೆಲಸ ಮಾಡಬಾರದು. ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಬೇಕು. ಬರೀ ಕಚೇರಿ, ಕೆಲಸ ಎಂದು ಕುಟುಂಬವನ್ನು ನಿರ್ಲಕ್ಷ್ಯ ಮಾಡಬಾರದು. ತಂದೆ, ತಾಯಿ, ಸಹೋದರ, ಸಹೋದರಿ, ಹೆಂಡತಿ ಮಕ್ಕಳಿಗು ಸಹ ಸಮಯ ನೀಡಬೇಕು. ಮಕ್ಕಳಿಗೆ ನಾವು ಎಟಿಎಂ ಆಗಬಾರದು. ಅವರಿಗೆ ಒಳ್ಳೆಯ ಸಂಸ್ಕಾರ ನೀಡಬೇಕು. ಮಕ್ಕಳು ಪಾಲಕರಿಂದ ಬರೀ ಹಣವನ್ನೇ ನಿರೀಕ್ಷೆ ಮಾಡುವುದಿಲ್ಲ. ಬದಲಾಗಿ ಅವರು ನಮ್ಮ ನಡೆ ನುಡಿಯನ್ನು ಗಮನಿಸುತ್ತಾರೆ. ಅವರಿಗೆ ಪ್ರೀತಿ, ಉತ್ತಮ ಮಾರ್ಗದರ್ಶನ ಕೊಡುವುದು ಪಾಲಕರ ಜವಾಬ್ದಾರಿಯಾಗಿರುತ್ತದೆ ಎಂದು ತಿಳಿಸಿದರು.



**ಅಧಿಕಾರಿಗಳ ಕಾರ್ಯವೈಖರಿಗೆ ಮೆಚ್ಚುಗೆ:**
ಜಿಲ್ಲೆಯಲ್ಲಿ ಕಂದಾಯ ಇಲಾಖೆಯಿಂದ ಉತ್ತಮ ಕಾರ್ಯಗಳಾಗುತ್ತಿವೆ. ಸರ್ವೇ ಸೇರಿದಂತೆ ಎಲ್ಲಾ ಕಾರ್ಯಗಳಲ್ಲಿ ವಿಜಯನಗರ ಜಿಲ್ಲೆಯ ಪ್ರಗತಿ ಉತ್ತಮವಾಗಿದ್ದು ಈ ಶ್ರೇಯಸ್ಸು ಜಿಲ್ಲೆಯ ಎಲ್ಲ ಕಂದಾಯ ಇಲಾಖೆಯ ಗ್ರಾಮ ಆಡಳಿತ ಅಧಿಕಾರಿಗಳು ಮತ್ತು ಇನ್ನಿತರ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಕೇಂದ್ರ ಸಂಘದ ಜಿಲ್ಲಾಧ್ಯಕ್ಷ ಯಂಕಾರೆಡ್ಡಿ ಕೆ ಪ್ರಾಸ್ತಾವಿಕ ಮಾತನಾಡಿ, 2022ರಲ್ಲಿ ಮೊದಲ ಬಾರಿಗೆ ಕಂದಾಯ ದಿನಾಚರಣೆ ನಡೆಸಲಾಯಿತು. ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಬಗ್ಗೆ ಉತ್ತಮ ಕಾಳಜಿ ಮತ್ತು ಸ್ಪಂದನೆ ಹೊಂದಿದ್ದರಿಂದಾಗಿ 2024ರಲ್ಲಿ ಕಂದಾಯ ದಿನಾಚರಣೆ ನಡೆಸುವಂತಾಯಿತು ಎಂದು ತಿಳಿಸಿದರು. ಕರ್ನಾಟಕ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಕೇಂದ್ರ ಸಂಘದ ಚಟುವಟಿಕೆಗಳ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ ಅವರು ನೀಡುತ್ತಿರುವ ಪ್ರೋತ್ಸಾಹ ಶ್ಲಾಘನೀಯವಾಗಿದೆ ಎಂದರು.

**ರಕ್ತದಾನ ಶಿಬಿರ:**
ಕಂದಾಯ ದಿನಾಚರಣೆ ನಿಮಿತ್ತ ರಕ್ತದಾನ ಶಿಬಿರ ಹಮ್ಮಿಕೊಂಡಿದ್ದು ವಿಶೇಷವಾಗಿತ್ತು. ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ ಅವರು ರಕ್ತದಾನ ಶಿಬಿರ ಉದ್ಘಾಟಿಸಿದರು. ಕಾರ್ಯಕ್ರಮದ ಸ್ಥಳದಲ್ಲಿಯೇ ರಕ್ತದಾನಕ್ಕೆ ವಿಶೇಷ ವ್ಯವಸ್ಥೆ ಮಾಡಲಾಗಿತ್ತು.

**ಪ್ರಶಸ್ತಿ ಪ್ರದಾನ:**
ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ 2024ನೇ ಸಾಲಿನಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದ ಕಂದಾಯ ನೌಕರರ ಮಕ್ಕಳಿಗೆ ಕಂದಾಯ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಯಿತು.
ವಿಜೇತರಿಗೆ ಬಹುಮಾನ: ಕಂದಾಯ ದಿನಾಚರಣೆ ಹಿನ್ನೆಲೆಯಲ್ಲಿ ಕಂದಾಯ ಅಧಿಕಾರಿಗಳು ಮತ್ತು ಸಿಬ್ಬಂದಿಯಿಂದ ದಿನಾಚರಣೆಯ ಪೂರ್ವ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ವಿವಿಧ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಇದೆ ವೇಳೆ ಜಿಲ್ಲಾಧಿಕಾರಿಗಳು ಪ್ರಮಾಣ ಪತ್ರ ಸಹಿತ ಬಹುಮಾನ ನೀಡಿದರು.

ಕಾರ್ಯಕ್ರಮದಲ್ಲಿ ಹರಪನಹಳ್ಳಿಯ ಸಹಾಯಕ ಆಯುಕ್ತರಾದ ಚಿದಾನಂದ ಗುರುಸ್ವಾಮಿ, ಹೊಸಪೇಟೆಯ ಸಹಾಯಕ ಆಯುಕ್ತರಾದ ವಿವೇಕಾನಂದ ಪಿ, ಹೊಸಪೇಟೆ ತಹಶೀಲ್ದಾರರಾದ ವಿಶ್ವಜೀತ ಮೇಹತಾ, ಹರಪನಹಳ್ಳಿಯ ತಹಶೀಲ್ದಾರರಾದ ಬಿ.ವಿ.ಗಿರೀಶ್ ಬಾಬು, ಹಗರಿಬೊಮ್ಮನಹಳ್ಳಿಯ ತಹಶೀಲ್ದಾರರಾದ ಚಂದ್ರಶೇಖರ್ ಶಂಭಣ್ಣ ಗಾಳಿ, ಕೂಡ್ಲಿಗಿಯ ತಹಶೀಲ್ದಾರರಾದ ಎಂ. ರೇಣುಕ, ಕೊಟ್ಟೂರು/ಹಡಗಲಿಯ ತಹಶೀಲ್ದಾರರಾದ ಅಮರೇಶ ಜಿ.ಕೆ., ಜಿಲ್ಲಾಧಿಕಾರಿಗಳ ಕಾರ್ಯಾಲಯದ ಚುನಾವಣಾ ತಹಶೀಲ್ದಾರರಾದ ಕಾರ್ತಿಕ ವಿ, ಮುನಿಸಿಪಲ್ ತಹಶೀಲ್ದಾರರಾದ ಮೇಘ, ಶಿಷ್ಟಾಚಾರ ತಹಶೀಲ್ದಾರರಾದ ಎಂ. ಪ್ರತಿಭಾ, ಹೊಸಪೇಟೆ ಸಹಾಯಕ ಆಯುಕ್ತರ ಕಚೇರಿಯ ಗ್ರೇಡ್–2 ತಹಶೀಲ್ದಾರರಾದ ಹೇಮಂತ್ ಕುಮಾರ್ ಸಿ. ದೊಡ್ಡಮನಿ, ಹರಪನಹಳ್ಳಿ ತಾಲೂಕು ಕಚೇರಿಯ ಗ್ರೇಡ್–2 ತಹಶೀಲ್ದಾರರಾದ ನಟರಾಜ ಜೆ, ಹೊಸಪೇಟೆ ತಾಲೂಕು ಕಚೇರಿಯ ಗ್ರೇಡ್–2 ತಹಶೀಲ್ದಾರರಾದ ವೆಂಕಟೇಶ್ ಆಶ್ರಿತ್, ಚುನಾವಣಾ ವಿಭಾಗದ ಶೀರಸ್ತೇದಾರ ಮನೋಜ ಲಾಡೆ, ಜಿಲ್ಲಾಧಿಕಾರಿಗಳಾದ ಆಪ್ತ ಸಹಾಯಕರಾದ ನಾಗರಾಜ ಎಂ., ನವೀನ್ ಸೇರಿದಂತೆ ಇನ್ನೀತರರು ಇದ್ದರು.

ಗ್ರೇಡ್–2 ತಹಶೀಲ್ದಾರರಾದ ಹೇಮಂತ್ ಕುಮಾರ್ ಸಿ. ಹಾಗೂ ಇನ್ನೀತರರು ಕಾರ್ಯಕ್ರಮದಲ್ಲಿ ಚಲನಚಿತ್ರ ಗಳನ್ನು ಹಾಡಿ ರಂಜಿಸಿದರು.






## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

SCAN & READ E-PAPER

Date: 21-07-2024

SSLC SOCIAL SCIENCE Hampi Times Margadarshi

### ಇತಿಹಾಸ ಅಧ್ಯಾಯ 2 : ಬ್ರೀಟಿಷ ಆಳ್ವಿಕೆಯ ವಿಸ್ತರಣೆ

1. ಸಹಾಯಕ ಸೈನ್ಯ ಪದ್ಧತಿ ಜಾರಿಗೆ ತಂದವರು ಯಾರು? (ಜೂನ್ 2022)
   **ಉತ್ತರ :** ಲಾರ್ಡ್ ವೆಲ್ಲಸ್ಲಿ
2. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ ಜಾರಿಗೆ ತಂದವರು ಯಾರು? (ಜೂನ್2019)
   **ಉತ್ತರ :** ಲಾರ್ಡ್ ಡಾಲ್ ಹೌಸಿ
3. 1 ನೇ ಆಂಗ್ಲೋ– ಮರಾಠ ಯುದ್ಧ ಕೊನೆಗೊಂಡ ಒಪ್ಪಂದ ಯಾವುದು? – (ಸೆ. 2020, ಜೂನ್2022)
   **ಉತ್ತರ :** ಸಾಲ್ಬಾಯ್ ಒಪ್ಪಂದ
4. 2ನೇ ಆಂಗ್ಲೋ–ಮರಾಠ ಯುದ್ಧ ಕೊನೆಗೊಂಡ ಒಪ್ಪಂದ ಯಾವುದು? (ಜೂನ್ 23)
   **ಉತ್ತರ :** ಬೆಸಿನ್ ಒಪ್ಪಂದ
5. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೊದಲ ರಾಜ್ಯ ಯಾವುದು?
   **ಉತ್ತರ :** ಹೈದರಾಬಾದ್ ಸಂಸ್ಥಾನ
6. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ ಜಾರಿಗೆ ಬಂದ ವರ್ಷ ?
   **ಉತ್ತರ :** 1848
7. ಸಹಾಯಕ ಸೈನ್ಯ ಪದ್ಧತಿ ಜಾರಿಗೆ ಬಂದ ವರ್ಷ ?
   **ಉತ್ತರ :** 1798
8. 1ನೇ ಆಂಗ್ಲೋ– ಮರಾಠ ಯುದ್ಧದ ನಂತರ ಮರಾಠರ ಪೇಶ್ವೆ ಯಾದವರು ಯಾರು?
   **ಉತ್ತರ :** ಎರಡನೇ ಮಾಧವ ರಾವ್
9. ಮರಾಠರ ಕೊನೆಯ ಪೇಶ್ವೆ ಯಾರು ?
   **ಉತ್ತರ :** ಎರಡನೇ ಬಾಜಿರಾಯ
10. 19ನೇ ಶತಮಾನದಲ್ಲಿ ಸಿಖ್ಖರನ್ನು ಸಂಘಟಿಸಿದವರು ಯಾರು?
    **ಉತ್ತರ :** ರಣಜಿತ್ ಸಿಂಗ್
11. ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗಳಿಸಿದವರು ಯಾರು? (ಎಪ್ರಿಲ್2024)
    **ಉತ್ತರ :** ಡಾಲ್ ಹೌಸಿ
12. ಸಹಾಯಕ ಸೈನ್ಯ ಪದ್ಧತಿಯ ಮುಖ್ಯ ಉದ್ದೇಶ ಏನಾಗಿತ್ತು? (ಜೂನ್ 2023)
    **ಉತ್ತರ :** ಭಾರತೀಯ ರಾಜ್ಯಗಳನ್ನು ನಿಯಂತ್ರಿಸುವುದಾಗಿತ್ತು.
13. ಲಾರ್ಡ್ ವೆಲ್ಲಸ್ಲಿ ತನ್ನ ಹುದ್ದೆಗೆ ರಾಜಿನಾಮೆ ನೀಡಿ ಇಂಗ್ಲಂಡಿಗೆ ಏಕೆ ಹಿಂದುರುಗಿದನು ? (ಎಪ್ರಿಲ್ 2024)
    **ಉತ್ತರ :** ಲಾರ್ಡ್ ವೆಲ್ಲಸ್ಲಿಯ ಯದ್ಧಪ್ರಿಯ ನೀತಿಯಿಂದ ಕಂಪನಿಯ ಸಾಲದ ಹೊರೆ ಹೆಚ್ಚಿದ್ದರಿಂದ ರಾಜಿನಾಮೆ ನೀಡಿ ಇಂಗ್ಲಂಡಿಗೆ ಹಿಂದುರುಗಿದನು
14. ಚಟ್ಟಾರ್ ಸಿಂಗ್ ಅಟ್ಟಾರಿವಾಲ ಮತ್ತು ಮೂಲರಾಜ್ ಆಂಗ್ಲರ ವಿರುದ್ಧ ಪ್ರತಿಭಟಿಸಲು ಕಾರಣವೇನು ?
    **ಉತ್ತರ :** 1848ರಲ್ಲಿ ಪಂಜಾಬಿನ ಮೇಲೆ ಬ್ರೀಟಿಷರು ನೇರ ಆಳ್ವಿಕೆಯನ್ನು ಹೇರಲು ಮುಂದಾಗಿದ್ದಕ್ಕೆ ಆಂಗ್ಲರ ವಿರುದ್ಧ ಪ್ರತಿಭಟಿಸಿದರು.
15. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಗೆ ಒಳಪಟ್ಟ ದೇಶೀಯ ರಾಜ್ಯಗಳಾವುವು? 2 ಅಂಕ
    **ಉತ್ತರ :** ಝಾನ್ಸಿ, ಸತಾರ ,ಜೈಪುರ್ ,ಸಂಬಲ್ಪುರ , ಉದಯಪುರ ಮತ್ತು ನಾಗಪುರ ರಾಜ್ಯಗಳು
16. ಎರಡನೇ ಆಂಗ್ಲೋ ಮರಾಠ ಯುದ್ಧಕ್ಕೆ ಪ್ರಮುಖ ಕಾರಣವೇನು? 2 ಅಂಕ
    **ಉತ್ತರ :** ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವು 2ನೇ ಆಂಗ್ಲೋ ಮರಾಠ ಯುದ್ಧಕ್ಕೆ ಪ್ರಮುಖ ಕಾರಣವಾಯಿತು.
17. ಸಹಾಯಕ ಸೈನ್ಯ ಪದ್ಧತಿ ಪದ್ಧತಿಯ ನಿಭಂದನೆಗಳಾವುವು? 3 ಅಂಕ (ಜೂನ್2020, ಎಪ್ರಿಲ್22, ಜೂನ್2024) ಅಥವಾ ಸಹಾಯಕ ಸೈನ್ಯ ಪದ್ಧತಿಯು ಭಾರತೀಯ ಸಂಸ್ಥಾನಗಳನ್ನು ಹೇಗೆ ನಿಯಂತ್ರಿಸುತಿತ್ತು ? (ಎಪ್ರಿಲ್2019)
    **ಉತ್ತರ :**
    * ಈ ಪದ್ಧತಿಯನ್ನು ವೆಲ್ಲೆಸ್ಲಿಯು ಜಾರಿಗೆ ತಂದನು
    * ದೇಶೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳ ಬೇಕು
    * ಸೇನೆಯ ವೆಚ್ಚವನ್ನು ಆ ರಾಜ್ಯವೇ ಭರಿಸಬೇಕು
    * ರಾಜನು ತನ್ನ ಆಸ್ಥಾನದಲಿ ಬ್ರೀಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು
    * ಬ್ರಿಟಿಷರ ಅನುಮತಿಯಿಲ್ಲದೆ ಯಾವುದೇ ಯುರೋಪಿಯನ್ನರನ್ನು
    * ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್ ಸಮ್ಮತಿ ಬೇಕು
    * ಕಂಪನಿಯು ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯರಕ್ಷಣೆ ಒದಗಿಸುವುದು.

*************************************************

'ಇತಿಹಾಸ ಅರಿಯದವನು ಇತಿಹಾಸ ನಿರ್ಮಿಸಲಾರ'

' ನಿನ್ನ ಏಳ್ಗೆಗೆ ನೀನೇ ಶಿಲ್ಪಿ '

*************************************************

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಕೊಟ್ರೇಶ್ ಮಾಳಿಗಿ.** ಸಮಾಜ ವಿಜ್ಞಾನ ಶಿಕ್ಷಕರು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )


ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಕಾಂಗ್ರೆಸ್ ಸರ್ಕಾರಕ್ಕೇನಾಗಿದೆ ?

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಭಾರಿ ಪ್ರಮಾಣದ ಭ್ರಷ್ಟಾಚಾರ ಈಗ ರಾಜ್ಯ ಸೇರಿದಂತೆ ದೇಶದಲ್ಲೂ ಸಂಚಲನ ಮೂಡಿಸಿದೆ. ಇದು ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ನಾಯಕರಿಗೆ ನುಂಗದ ತುತ್ತಾಗಿ ಪರಿಣಮಿಸಿದೆ. ಈಗಾಗಲೇ ಸಚಿವರಾಗಿದ್ದ ಬಿ.ನಾಗೇಂದ್ರ ಅವರಿಂದ ರಾಜೀನಾಮೆ ಪಡೆಯಲಾಗಿದೆ. ಇದು ರಾಜ್ಯ ಸರ್ಕಾರದ ಹಿನ್ನಡೆ ಎನ್ನಬಹುದು. ತನಿಖೆ ನಡೆಯುತ್ತಿದ್ದು, ಭವಿಷ್ಯದಲ್ಲಿ ಸಿದ್ದರಾಮಯ್ಯ ಅವರ ಸಿಎಂ ಕುರ್ಚಿಗೂ ಕಂಟಕ ಎದುರಾಗಬಹುದು. ಮೊದಲೇ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಾಗುತ್ತಿಲ್ಲ ಎಂದು ಭಾರತೀಯ ಜನತಾ ಪಕ್ಷದ ನಾಯಕರು ಪದೇಪದೆ ದೂರುತ್ತಿದ್ದಾರೆ. ಇದು ಸತ್ಯವೂ ಹೌದು. ನೀವು ಗಮನಿಸಿ, ಕಾಂಗ್ರೆಸ್ ಸರ್ಕಾರದ ಶಾಸಕ ಮತ್ತು ಸಚಿವರೇ ಹೇಳುತ್ತಿದ್ದಾರೆ.. ನಮ್ಮಲ್ಲಿ ಅಭಿವೃದ್ಧಿಗೆ ಹಣವಿಲ್ಲವೆಂದು. ಏಕೆಂದರೆ ಇರೋಬರೋ ಹಣವನ್ನೆಲ್ಲ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಮೀಸಲಿಟ್ಟಿದೆ. ಬಜೆಟ್ಟಿನ ಬಹುಪಾಲು ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ವ್ಯಯಿಸಬೇಕಿದೆ. ಹೀಗಾದರೆ ಅಭಿವೃದ್ಧಿ ಹೇಗಾಗುತ್ತೆ? ಎಲ್ಲಿಯೂ ಶಾಸಕರಿಂದಾಗಲಿ, ಸಚಿವರಿಂದಲಾಗಲಿ ಭೂಮಿ ಪೂಜೆ, ಅಡಿಗಲ್ಲು ಸಮಾರಂಭ, ಕಾಮಗಾರಿಗೆ ಚಾಲನೆ, ಬೃಹತ್ ಕಾಮಗಾರಿಗಳಿಗೆ ಶಂಕುಸ್ಥಾಪನೆ ಇಂಥ ಯಾವ ಕಾರ್ಯಕ್ರಮಗಳೂ ನಡೆಯುತ್ತಿಲ್ಲ. ಅಭಿವೃದ್ಧಿ ಎಂಬುದು ನಿಂತ ನೀರಾಗಿದೆ. ಹರಿಯುವ ಬದಲು ಸ್ಥಗಿತಗೊಂಡಿದೆ. ಭವಿಷ್ಯದಲ್ಲಿ ಅಭಿವೃದ್ಧಿ ಎಂಬುದಕ್ಕೆ ಹಿನ್ನಡೆಯಾದರೆ ರಾಜ್ಯವನ್ನು ಮುನ್ನಡೆಸುವುದು ಬಲು ಕಷ್ಟವಾದೀತು. ಅಧಿಕಾರಕ್ಕೆ ಬರಲೇ ಬೇಕೆಂಬ ಹಠದಿಂದಲೋ ಅಥವಾ ಜನರಿಗೆ ಒಳಿತಾಗಲೆಂಬ ಸದುದ್ದೇಶದಂದಲೋ ಏನೋ ಗ್ಯಾರಂಟಿಗಳನ್ನು ಕಾಂಗ್ರೆಸ್ ತಂದಿತ್ತು. ಈ ಗ್ಯಾರಂಟಿಗಳಿಗೆ ಮನಸೋತ ಮತದಾರರು ಅವರನ್ನು ಚುನಾಯಿಸಿ ತಂದಿದ್ದರು. ಆದರೀಗ, ಗ್ಯಾರಂಟಿಗಳಿಗೆ ಹಣ ಹೊಂದಿಸಲೆಂದೆ ಸರ್ಕಾರ ರೂಪುಗೊಂಡಿದೆ ಎಂದೆನಿಸುತ್ತದೆ. ಸರ್ಕಾರದ ಉದ್ದೇಶ ಒಳ್ಳೆಯದಾದರೂ ಅದನ್ನು ನಿಭಾಯಿಸುವಲ್ಲಿ ತಡವರಿಸುತ್ತಲೇ ಇದೆ. ಸರ್ಕಾರ ರಚನೆಯಾಗಿ ಒಂದು ವರ್ಷ ಮೂರು ತಿಂಗಳು ಕಳೆದರೂ ಟೇಕ್ ಆಫ್ ಆಗಿಲ್ಲ ಎಂಬುದು ಸ್ಪಷ್ಟವಾಗುತ್ತಿದೆ. ಇದು ಹೀಗಿರಲಿ.. ಗ್ಯಾರಂಟಿ ಯೋಜನೆಗಳಾದರೂ ಸಮರ್ಪಕವಾಗಿ ಅರ್ಹ ಫಲಾನುಭವಿಗಳಿಗೆ ತಲುಪುತ್ತಿದೆಯಾ ಎಂದು ಪ್ರಶ್ನಿಸಿದರೆ ಅದೂ ಇಲ್ಲ. ಈಗ ಗೃಹಲಕ್ಷ್ಮೀ ಯೋಜನೆಯನ್ನೇ ತೆಗೆದುಕೊಳ್ಳಿ. ನಿಯಮಿತವಾಗಿ ಗೃಹಲಕ್ಷ್ಮೀ ಯೋಜನೆ ಹಣ ಅರ್ಹರಿಗೆ ತಲುಪುತ್ತಿಲ್ಲ. ಕಳೆದ ಎರಡು ತಿಂಗಳಿಂದ ಬಂದೇ ಇಲ್ಲ. ಕೆಲವರಿಗೆ ನಿಯಮಿತವಾಗಿ ಬರುತ್ತಲೇ ಇಲ್ಲ, ಒಂದು ತಿಂಗಳ ಬಂದರೆ, ಮತ್ತೆ ಯಾವಾಗಲೂ ಬರುತ್ತಿದೆ. ಇದಕ್ಕೊಂದು ದಿನ ನಿಗದಿಯಿಲ್ಲ ಮತ್ತು ನಿಯಮಿತವಿಲ್ಲ. ಕೆಲವರಿಗೆ ಒಂದೆರಡು ತಿಂಗಳು ಹಣ ಬಂದು ಹೋಗಿ, ನಂತರದ ದಿನಗಳಲ್ಲಿ ನಿಂತೇ ಹೋಗಿದೆ. ಅಂಥವರು ಏನು ಮಾಡಬೇಕು ? ಕಚೇರಿ ಮತ್ತು ಬ್ಯಾಂಕುಗಳನ್ನು ಅಲೆದಲೆದು ಸುಸ್ತಾಗಿದ್ದಾರೆ ವಿನಾ ಹಣ ತಲುಪುತ್ತಿಲ್ಲ. ಸ್ವಲ್ಪ ಸಮಾಧಾನವೆಂದರೆ ಮಹಿಳೆಯರಿಗೆ ಉಚಿತ ಪಯಾಣ ನಿರಂತರವಾಗಿದೆ. ಇದರಲ್ಲೂ ತೊಂದರೆಗಳೇ ಇಲ್ಲವೆಂದೇನಿಲ್ಲ. ಬಸ್ ಟಿಕೆಟ್ ದರ ಹೆಚ್ಚಾಗುವ ಸಾಧ್ಯತೆಯಿದ್ದು, ಇದು ಪುರುಷರ ಪಾಕೇಟ್ ಮನಿ ಮೇಲೆ ಪರಿಣಾಮ ಬೀರಲಿದೆ. ಮನೆಗಳಿಗೆ ವಿದ್ಯುತ್ ಉಚಿತ ಕೊಟ್ಟಿರುವುದೇನೋ ಸರಿ. ಆದರೆ, ವಾಣಿಜ್ಯ ಬಳಕೆಯ ವಿದ್ಯುತ್ ದರ ಹೆಚ್ಚಳ ಮಾಡಿರುವುದು ವ್ಯವಹಾರ ನಡೆಸುವವರಿಗೆ ನಷ್ಟವುಂಟಾಗಿದೆ. ಒಂದೇ ಸರಿಯಾಗಿ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸಬೇಕು. ಇಲ್ಲವಾದಲ್ಲಿ ಗ್ಯಾರಂಟಿಗಳನ್ನು ನಿಲ್ಲಿಸಿ, ಅಭಿವೃದ್ಧಿ ಕರ್ನಾಟಕದತ್ತ ಗಮನ ಹರಿಸಬೇಕು. ಇದಾವುದನ್ನೂ ಮಾಡದ ರಾಜ್ಯ ಕಾಂಗ್ರೆಸ್ ಸರ್ಕಾರವೀಗ ವಾಲ್ಮೀಕಿ ನಿಗಮ ಹಗರಣದಲ್ಲಿ ಸಿಲುಕಿ ಒದ್ದಾಡುತ್ತಿದೆ. ಆದರೆ, ಜನಸಾಮಾನ್ಯರಿಗೆ ಏನೂ ಉಪಯೋಗವಾಗುತ್ತಿಲ್ಲ. ಎಲ್ಲ ಸಮಸ್ಯೆಗಳನ್ನು ಮೆಟ್ಟಿ ನಿಲ್ಲುವ ಮೂಲಕ ಕಾಂಗ್ರೆಸ್ ಸರ್ಕಾರ ಜನಪರ ಆಡಳಿತ ನಡೆಸಲಿ ಎಂದು ಆಶಿಸೋಣ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಐಡಿಯಾ ಮಾಡ್ಯಾರ..!



ಈ ಪ್ರಕೃತಿನೇ ಹಾಗೆ ಆ ಕಾಡು ಬೆಟ್ಟ ಮರ ಗಿಡಗಳು, ಬಣ್ಣ ಬಣ್ಣದ ಹಕ್ಕಿಗಳು ಅಂದ್ರೆ ಹಾಗೆನೆ, ಮುಪ್ಪಾನು ಮುದುಕರಿಗೂ ತಣಿಯದ ಕುತೂಹಲ, ಇನ್ನು ನಮ್ಮನ್ನು ಕೇಳಬೇಕೆ.

ಪಾಟಿ ಚೀಲ ತಕ್ಕೊಂಡು ಶನಿವಾರದ ಮಗ್ಗಿ, ಕಕಾಕಿಕೀ, ಅಆಇಈ ಬರೆದು, ಹೂವಾಡಗಿತ್ತಿ ಪದ್ಯ ಬಾಯಿಪಾಠ ಶುರು ಮಾಡೊ ಹೊತ್ತಿಗೆ ನಮ್ಮವ್ವ ರೊಟ್ಟಿ ತಟ್ಟೋ ಶಬ್ದದ ತಾಳಕ್ಕೆ ನನ್ನ ಹೊಟ್ಟೆಯಲ್ಲಿ ದೊಡ್ಡಟ ಸಣ್ಣಾಟದ ತಾಳ ಚಲುವಾಯ್ತು. ತಕ್ಷಣಕ್ಕೆ ಎರಡು ರೊಟ್ಟಿ ತಿಂದು ಬೇಗ ಮಲಗಿದೆ. ಯಾಕಂದರ ನಮ್ಮ ಐಡಿಯಾ ಪ್ರಕಾರ ನಾಳೆ ಬೇಗನೆ ಎದ್ದು ನಾವು ನಮ್ಮೂರ ಬೆಟ್ಟಕ್ಕೆ ಹೋಗಬೇಕಿತ್ತು, ಇದಕ್ಕ ಗೊಂಗಾಡಿಯೂ ಒಪ್ಪಿದ್ದ.

"ಅಡವಿ ಹಡದ ತಾಯಿ ಊರು ಮಲತಾಯಿ" ಅಂದ ಹಾಗೆ ನಮ್ಮೂರ ಬೆಟ್ಟಕ್ಕೆ ಹೋಗುವ ದಾರಿಯ ಅಕ್ಕ-ಪಕ್ಕದ ಗಿಡಗಳೆಲ್ಲ ನಾವು ಹೋಗುವ ದಾರಿಗೆಲ್ಲ ಚಪ್ಪರ ಹಾಕಿದ್ವು. ಮೊದಲು ನೆಲ ಅಡವಿ ಬರ್ತದೆ ಅಲ್ಲಿ ಕಾರಿಟಂಗು ಬಹಳ ಇರ್ತಾವು ಬಾರಿಹಣ್ಣು ಸಿಗತಾವು ತಿಂದಕಂತ ಹೋಗೋಣ ಅಂದ ಶಿವ. ಅಲ್ಲಿ ಹುಲಿ ಇದೆಯಂತೆ ಹೌದ! ಎಂದ ಗೆಳೆಯನ ಮುಖ ನೋಡುತ್ತ ಹುಂ, ಸಿಂಹಾನು ಇದೆ ಬಾರಪ್ಪಾ ತೋರಸ್ತೀನಿ ಅಂದೆ, ಅಲ್ವೆ ಮತ್ತೆ ಇವನು ಕೇಳೋ ಪ್ರಶ್ನೆಗೆ ಇನ್ನೇನು ಹೇಳೋದು ? ಅವೆಲ್ಲ ಇದ್ವಂತೆ ನಮ್ಮಜ್ಜರ ಕಾಲದಾಗ, ಈಗ ಅವೆಲ್ಲ ಇಲ್ಲ, ಯಾಕಾಂದರೆ ಅವನ್ನೆಲ್ಲಾ ಬೇಟಿ ಆಡಿ ಸಾಯಿಸಿದ್ದಾರಂತೆ. ಹೌದಾ? ಅವನಲ್ಲ ಯಾಕ್ ಸಾಯಿಸಿದರಂತೆ? ಗೆಳೆಯನ ಪ್ರಶ್ನೆಗೆ ನಗೆಯಾಡುತ್ತಾ, ನೋಡ್ರಪ್ಪ ಇವನ್ನ ಅಲ್ವೋ ಏನು ಅಂತ ಕೇಳ್ತೀಯೋ ಮಹಾರಾಯ, ನೀನು ಏನಾದರೂ ಕೇಳುವುದಿದ್ದರೆ ಊರಿನಲ್ಲಿರುವ ದೊಡ್ಡ ದೊಡ್ಡ ಹೊಟ್ಟೆಯ ಜನರನ್ನು ಕೇಳು ಅವರೇ ಹೇಳುತ್ತಾರೆ ಪ್ರಾಣಿಗಳನ್ನು ಏಕೆ ಭೇಟಿಯಾಡುತ್ತಾರೆ ಎನ್ನುವುದನ್ನು.

ಮುಂದೆ ಬರೋದೆ ನೆಲ ಅಡವಿ ಆ ಅಡವೀಲಿ ಏನೇನೊ ಇರ್ತೆವ್ವ ಅಂದರೆ ಅಲ್ಲಿ ಬರಿ ಮುಳ್ಳಿನಂತ ಗಿಡಗಳು ಕಾರಿಗಿಡ, ತುಗ್ಗಿ ಮರ, ಬೆಟಾರಿ ಗಿಡ, ಹಾಲವೊಂಡ ಗಿಡ, ಅವ್ನ ಬಿಟ್ರ ಮತ್ತೆ ಕರಿ ಜಾಲಿ, ಉತ್ರಾಣಿ ಗಿಡ, ಹಾಲು-ಮೊಸರು ಗಿಡ, ಕಾಚಿ ಕಡ್ಡಿ, ಬ್ರಹ್ಮದಂಡೆ, ಹೋನ್ನಾರಿಕೆ ಗಿಡ, ಅಲ್ಲಾಲ್ಲೇ ಚಂದ್ರ ಮುಖಿ ಹುಲ್ಲು ಬೆಳೆದಿರುತ್ತದೆ, ಏನು? ಹಾಲು- ಮೋಸರು ಗಿಡ ಇರ್ತದಾ? ಹೌದ್ಲೆ ಗೆಳೆಯ ಮನ್ಯಾಗ ಸಿಗೊ ಹಾಲು- ಮೋಸರಲ್ಲ ಇದು, ನಿಮ್ಮ ಮನೀಲಿ ಸೀಗಿ ಹುಣ್ಣಿಮೆಗೆ ನೀವು ಹಟ್ಟಿ ಲೆಕ್ಕವ್ವನ ಅಂದ್ರ ಗುರ್ಜವ್ವನ ಹಾಂ, ಅದೆ ಗುರ್ಜವ್ವನ ಕೂರಿಸಿದಾಗ ಇವೆಲ್ಲಾ ಪೋಜೆ ಮಾಡಲಿಕ್ಕೆ ಬೇಕು, ನಾನು ನಮ್ಮಪ್ಪನ ಜೊತೆಗೆ ಬಂದು ಇವ್ನನೆಲ್ಲ ಕಿತ್ತುಕೊಂಡು ಹೊಗ್ತಿತಿದ್ದೆ ಗುತ್ತಾಯ್ತು.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Hampi Times E-paper
SCAN AND READ

ಹೆ ಅಲ್ಲಿ ನೋಡೊ ತೋಳ-ತೋಳ, ಅದಾ, ಎ ಎಪ್ಪಾ ಮಾರಯಾ ಅದು ತೋಳ ಅಲ್ಲೋ, ಮತ್ತೇನು? ಅದು ನರಿ, ಅದ್ರ ಬಾಲ ನೊಡು ನೆಟ್ಟಗ ನೆಲ ನೊಡತದೆ, ಹೌದಲ್ಲೊ! ಹಾಂ ಅದು ನರಿ, ತೋಳಾನು ನೊಡಲಿಕ್ಕೆ ಥೇಟ್ ನಾಯಿ ತರನಾ ಇರತದೆ, ಇವತ್ತು ಒಂದು ಪ್ರಾಣಿನು ಸರಿಯಾಗಿ ಕಾಣವಲ್ದು ನೋಡೂ, ಲೇ ತಮ್ಮಾ ನಾನು ಆವಾಗ್ಲೇ ಹೇಳಿಲ್ವಾ, ಊರಾಗ ಹೋಗಿ ದೊಡ್ಡ-ದೊಡ್ಡ ಜನರ ಹೊಟ್ಟಿ ನೋಡುಪ್ಪಾ ಹಂಡೇ-ಹಂಡೆ ಇದ್ದಾಂಗ ಅವ, ಅಂದರ! ಅವೆಲ್ಲ ಅವರಹೊಟ್ಯಾಗ ಅದಾವಲೇ ತಮ್ಮ, ಅಂದರೆ ಮೊದಲು ಇಲ್ಲಿ ನರಿ, ತೊಳ, ಮೊಲಗಳು, ಹಂದಿಗಳು, ಮಿಕಗಳು ಅಂತೀವಿ ನೊಡು ಅವ ಮತ್ತೆ ನಾಗರ ಹಾವುಗಳು, ಕೆರೆ ಹಾವುಗಳು, ಮಣ್ಣ ಮುಕ್ಕ ಹಾವುಗಳು, ಒತಿ ಕೇತಗಳು, ಉಡ, ಹಾವರಾಣಿ ಬೇರೆ ಬೇರೆ ಜಾತಿಯ ಹಲ್ಲಿಗಳು ಇದ್ವಂತೆ.

ನಮ್ಮಪ್ಪ ಒಮ್ಮೆ ಹೇಳಿದ್ದ ಆತ ಸಣ್ಣವ ಇದ್ದಾಗ ನಮ್ಮಜ್ಜಾರು ಗುಡ್ಡದ ಹೊಲದಿಂದ ಹುಲಿ ನೋಡಿ ಊರಿಗೆ ಓಡಿ ಬಂದಿದ್ದ ರಂತೆ, ಈಗ ಏನು ಇಲ್ಲಪ್ಪ ಬರಿ ಒಂದೊ ಎರಡೊ ನರಿ, ಹಾವು ಕಾಣ್ತಾವು ಅಷ್ಟೆ, ಮನುಷ್ಯನ ಕಣ್ಣು ಬಿದ್ದ ಮೇಲೆ ಯಾವುದು ಉಳಿತದ ಹೇಳು ಎಲ್ಲಾ ಹಾಳ ನೋಡಾ ಎನ್ನುತ್ತಿದ್ದ ಶಿವನ ಮನಸ್ಸಿನಲ್ಲಿ ಮಾನವನ ದುರಾಸೆಯ ಗುಣವನ್ನು ಒಪ್ಪಿಕೊಳ್ಳಲು ಹಿಂದೇಟು ಹಾಕಲಿಕತ್ತಿತ್ತು. ಆದರ ವಾಸ್ತವ ಜಗತ್ತು ಇರೂದೇ ಹೀಗಲ್ವ ಎಂದು ತನ್ನಷ್ಟಕ್ಕೆ ತಾನೆ ಸಮಾಧಾನ ಮಾಡಿಕೊಂಡು ನಿಟ್ಟುಸಿರಿನೊಂದಿಗೆ ಮುಂದೆ ಸಾಗುತ್ತಿದ್ದ.

ಇನ್ನೇನು ಆಗತೈತೊ ಪ್ರತಿ ವರುಷ ಬ್ಯಾಸಿಗಿಯಲ್ಲಿ ಈ ಪರಿ ಮರ ಕಡಿತಾರ, ಸಾಲದಕ್ಕೆ ಗುಡ್ಡಕ್ಕೆ ಬೆಂಕಿ ಹಚ್ಚತಾರ, ಇನ್ನ ಆ ಪ್ರಾಣಿಗಳು ಎಲ್ಲಿ ಹೊಗಬೇಕು ಹೇಳು? ನಾವಾದರ ಆದರ ಮನಿ ಸೇರಕೊಳ್ಳುತ್ತೆವಿ, ಅವುಗಳಿಗೆ ಕಾಡು, ಗುಡ್ಡ, ಯಾವೊದೋ ಗಿಡದ ಬುಡ, ಪೊದೆ ಇವೆ ಮನೆ ಅಲ್ವಾ! ಇಲ್ಲಿ ನೋಡು ಯಾವೊದೊ ಗಿಡದ ಬೀಜ? ಅಲ್ವೊ ಮಾರಾಯ, ಮತ್ತೆ? ಅವು ಮಲದ ಹಿಕ್ಕಿ, ನೋಡು ಒಣಗಿರಾಕ ಎಷ್ಟು ಹಗುರ ಅವಾ! ತು ಹಿಕ್ಕಿನಾ? ಆಯ್ಯೊ ಇವನ ನೋಡು ಅದರ ಹಿಕ್ಕಿ ಬಹಳ ಔಷದಕ ಬರತದೆ, ನಮ್ಮಜ್ಜ ಮನಿಯಲ್ಲಿ ಒಂದು ಡಬ್ಬಿ ತುಂಬಿ ಇಟ್ಟದ್ದ, ಹಿಕ್ಕಿನಾ! ಔಷದನಾ! ಹೌದೊ ಮರಾಯ, ಯಾಕಂದ್ರ ಇವು ನಿನ್ನ ಹಿಕ್ಕಿಯಾಂಗ ವಾಸನಿ ಇಲ್ಲಾ ನೋಡು ಅದಕ ಹ್ಹಾ ಹ್ಹಾ ಹ್ಹಾ.

ಅಲ್ಲಿ ನೋಡ್ರೊ ಮಾವಿನ ಮರ, ಯಪ್ಪಾ ಹಣ್ಣು ನೊಡ್ರಿಲೇ, ಹೇ ಮರ ಹತ್ತಾನ್ರಿ, ಗೆಳೆಯ ಮರ ಹತ್ತಲೆ, ಇಲ್ಲಾಪ್ಪ ನನಗೆ ಮರ ಹತ್ತಾಕ ಬರಲ್ಲಾ ನೀನೆ ಹತ್ತು. ನಾನು ಹತ್ತಿ ಹಣ್ಣು ಹರದು ಕೊಡತೀನಿ ತಡ್ರಿ, ಶಿವ ತುದೀಗೆ ಹೊಗಬೇಡ ಬಿದ್ದೀಯ, ಸುಮ್ನಿರ್ಲೆ ತಮ್ಮಾ ಇಂತ ಎಷ್ಟು ಮರ ಹತ್ತಿಲ್ಲ ನಾನು, ಅಯ್ಯೊ ಅಯ್ಯೊ ಅಯ್ಯಯ್ಯೊ! ಬಿದ್ದಿನಪ್ಪೋ ಅಯ್ಯೊ ಅಯ್ಯಯ್ಯೋ.

ಎ ಎಪ್ಪಾ ಇನ್ನು ಮಲಗೀ ಯಲ್ಲ ಏಳು ಏಳಪ್ಪಾ ಈವತ್ತು ಶನಿವಾರ, ಬೆಳಗಿನ ಸಾಲಿ ಐತಿಲ್ಲ ಮರತಿ ಏನೋ? ಎಲಾ ಇವನಾ ಯಾಕಲಾ ಕಟ್ಟಿ ಮ್ಯಾಗಿಂದ ಕೆಳಗ ಬಿದ್ದೀ! ಎಷ್ಟ ಸಲ ಹೇಳ್ತೀನಿ ನೀನು ಬಾಳ ಒದ್ದಾಡ್ತಿ ಕಟ್ಟಿ ಮ್ಯಾಲ ಮಲಗಬ್ಯಾಡ ಅಂತ, ಈಗ ಗೊತ್ತಾಯ್ತು, ಪೆಟ್ಟಾಯ್ತು, ಹಾಂ ಪೆಟ್ಟಾಯ್ತೇನೊ, ಇಲ್ಲಬೆ ಅಂತ ಹೇಳಿ ಸುತ್ತಾ ನೋಡಿದರ ಕಟ್ಟಿ ಮ್ಯಾಗಿಂದ ಟವಲ್ ಸುತ್ತಿಕೊಂಡು ಕೆಳಗ ಬಿದ್ದಿದ್ದೆ, ಅಯ್ಯೊ ಕನಸು!!! ಯವ್ವಾ ಚಣ್ಣ ಎಲ್ಲಿ ಇಟ್ಟಿಯಬೆ ಅಂದಕೊಂತ ಹೊರಗೆ ಬಂದೆ.

# ಪ್ರತಿಯೊಂದರಲ್ಲೂ ಗುರುವಿದ್ದಾರೆ



ಗುರುಪೂರ್ಣಿಮೆ ಆದಿಯಿಂದಲೂ ಗುರುಗಳನ್ನು, ಗುರು ಪರಂಪರೆಯನ್ನು, ಪರಬ್ರಹ್ಮ ಸ್ವರೂಪದಲ್ಲಿ ಪೂಜಿಸಿ, ಗುರುವಿನಲ್ಲಿ ತ್ರಿಮೂರ್ತಿಗಳಾದ ಬ್ರಹ್ಮ-ವಿಷ್ಣು-ಮಹೇಶ್ವರನ್ನು ಕಾಣುವ ಪುಣ್ಯ ಭರತ ಭೂಮಿ ನಮ್ಮದು. ಗುರುವಿನ ಮಹಿಮೆಯೇ ಅಂತಹುದು.

ನಮ್ಮಲ್ಲಿಯ ಎಲ್ಲಾ ಬಗೆಯ ಅಂಧಕಾರ ದೂರಮಾಡುವ ಗುರುಗಳು, ತಮ್ಮ ಮೂಲಕ ವಿದ್ಯಾರ್ಥಿಗಳಿಗೆ ಜ್ಞಾನ, ತಿಳುವಳಿಕೆಯನ್ನು ನಮಗೆ ಪ್ರವಹಿಸುತ್ತಿರುವ ಶಕ್ತಿ. ಗೊತ್ತಿರದ ಅನೇಕ ವಿಷಯಗಳ ಬಗ್ಗೆ ಜಾಗೃತಿ ಮೂಡಿಸಿ, ತಮ್ಮ ಜೊತೆಗೆ ಬರುವವರನ್ನು, ವಿದ್ಯಾರ್ಥಿಗಳನ್ನು ಮುನ್ನೆಡೆಸುವ ಪ್ರತಿಯೊಬ್ಬರ ಬದುಕಿನ ದಾರಿದೀಪವೇ ಗುರುಗಳು.

ವ್ಯಕ್ತಿ ಬೆಳೆದಂತೆಲ್ಲಾ ಬದುಕಿಗೆ, ಕೇವಲ ಶಿಕ್ಷಣ ಒಂದೇ ಬೇಕಾಗುವುದಿಲ್ಲ. ಜೊತೆಗೆ ಬದುಕಿಗೆ ಆಧ್ಯಾತ್ಮದ ಸ್ಪರ್ಶವೂ ಬೇಕಾಗುವುದು ಎಂಬುದು ನನ್ನ ಭಾವನೆ. ಹಾಗಾಗಿಯೇ ಎರಡು ಬಗೆಯ ವಿಶೇಷ ಗುರುಗಳು ಪ್ರತಿಯೊಬ್ಬರ ಜೀವನದಲ್ಲೂ ಇರುವರು. ಅವರೇ, ಇಹದಲ್ಲಿ ಬದುಕಲು ಬೇಕಾಗುವ ಔಪಚಾರಿಕ ಶಿಕ್ಷಣ ಒದಗಿಸುವ, 'ಲೌಕಿಕ ಗುರುಗಳು' ಒಬ್ಬರಾದರೆ, ಮತ್ತೊಂದೆಡೆ ವ್ಯಕ್ತಿಯ ಬದುಕಲ್ಲಿ ಆಧ್ಯಾತ್ಮಿಕ ಮಾರ್ಗವನ್ನು, ಸರಿಯಾಗಿ ತೋರಿಸಿ, ಆ ಮೂಲಕ ಬದುಕಿದ ಮಾರ್ಗ ತೋರುವ 'ಆಧ್ಯಾತ್ಮಿಕ ಗುರುಗಳು' ಮತ್ತೊಬ್ಬರು.

**"ಗುರುಗಳಿಗೆ-ಹಿರಿಯರಿಗೆ ಶಿರಬಾಗಿ ನಡೆದರೆ, ನರಸುರರು ಒಲಿದು, ಸಿರಿ ಸುರಿಯುವುದು ಸರ್ವಜ್ಞ"**, ಎಂದು ಸರ್ವಜ್ಞರು, ಗುರು-ಹಿರಿಯರ ಪ್ರಾಮುಖ್ಯತೆ ಹೇಳಿದ್ದಾರೆ.


"ಹರಕೊಲ್ಲಲ್ ಗುರು ಕಾಯ್ವನು"ಎಂಬ ಆಧ್ಯಾತ್ಮದ ಮಾತಿದೆ. ಗುರುವಿನ ಶಕ್ತಿ ಜೊತೆ ಇದ್ದರೆ, ಎಂತಹ ಕಷ್ಟ ಕಾರ್ಪಣ್ಯವನ್ನು ಎದುರಿಸಿಬಹುದು. "ಗುರುವಿನ ಗುಲಾಮ ನಾಗುವ ತನಕ ದೊರೆಯದಣ್ಣ ಮುಕುತಿ" ಎನ್ನುವಂತೆ, "ಜೀವನವೆಂಬ ನದಿಯ ದಾಟಲು, ದೋಣಿಯೊಂದಿಗೆ, ಹರಿಗೋಲೆಂಬ ಗುರುವು ಜೊತೆಗಿದ್ದಾರೆ ಮಾತ್ರ, ಸಾಗುವ ಹಾದಿಗೆ ಸ್ಪಷ್ಟವಾದ ಬೆಳಕು ಬಿದ್ದು ಹಾದಿ ಗೋಚರವಾಗುವುದು".

ಮಗುವಿಗೆ ಮನೆಯೇ ಮೊದಲ ಪಾಠ ಶಾಲೆ, ತಾಯಿಯೇ ಮೊದಲ ಗುರುವಾದರೂ ಸಹ, ಬೆಳೆದಂತೆಲ್ಲಾ ಅದನ್ನು ಪ್ರತಿಹಂತದಲ್ಲೂ ತಿದ್ದುತ್ತಾ, ಕೈ ಹಿಡಿದು ಮುನ್ನಡೆಸುವವರು ಶಿಕ್ಷಕರು, ಗುರುಗಳಾಗಿರುತ್ತಾರೆ. ಇದನ್ನು ನಾವು ಪಾಲ್ಕುರಿಕೆ ಸೋಮನಾಥರು ತಮ್ಮ, ಸೋಮೇಶ್ವರ ಶತಕದಲ್ಲಿ ಕಾಣುತ್ತೇವೆ. ಶತಕದಲ್ಲಿ "ವರ್ಣ ಮಾತ್ರಂ ಕಲಿಸಿದಾತಂ ಗುರು"ಎಂದು, ಅಜ್ಞಾನದ ಕತ್ತಲೆಯಿಂದ, ಸುಜ್ಞಾನದ ಬೆಳಕಿನೆಡೆ ಕರೆದೊಯ್ಯುವ, ಅಕ್ಷರ ಕಲಿಸಿದವರು ಗುರುಗಳು ಎಂದಿದ್ದಾರೆ. ನಿಜ, ಜೊತೆಗೆ ಜೀವನದ ಪ್ರತಿ ಹಂತದಲ್ಲಿ, ಪ್ರತಿ ಹೆಜ್ಜೆಯಲ್ಲಿ ತಿಳುವಳಿಕೆ ಮೂಡಿಸುವವರು ಸಹ ಗುರುಗಳೇ ಕಾರಣ, ನಾವು ಸಮಾಜದಲ್ಲಿ, ಪ್ರಕೃತಿಯಲ್ಲಿ ಪ್ರತಿಯೊಂದರಿಂದ, ಪ್ರತಿಯೊಬ್ಬರಿಂದ ಪ್ರತಿಕ್ಷಣವೂ ಕಲಿಯುತ್ತಲೇ ಇರುತ್ತೇವೆ. ಮಕ್ಕಳಿಂದ ಮುಗ್ಧತೆ, ನಿಷ್ಕಲ್ಮತೆ. ಕನ್ನಡಿಯಿಂದ ಇರುವುದನ್ನು ಇದ್ದಂತೆ ತೋರಿಸುವ ಪ್ರತಿಫಲನದ ನೀತಿ. ನೀರಿನಿಂದ ಹೊಂದಿಕೊಳ್ಳುವುದು ಗುಣ. ಆಕಳಿಂದ ಪರೋಪಕಾರ, ಸಾಧುತ್ವ. ಗಿಡಮರಗಳಿಂದ ತನಗಾಗಿ ಏನೂ ಬಯಸದೇ ಪರರ ಒಳಿತಿಗಾಗಿ ಮೀಸಲಾಗಿರುವುದು, ಕಾಗೆಯಿಂದ ಹಂಚಿ ತಿನ್ನುವ ಪಾಠ. ದೀಪದಿಂದ ಬೆಳಕು, ನಾಯಿಯಿಂದ ನಿಯತ್ತು, ಮಳೆಯಿಂದ ಸ್ವಚ್ಛತೆ, ಹೂವಿನಿಂದ ಸಂತಸ, ಸುಂದರತೆ. ಬೆಟ್ಟದಿಂದ ಸ್ಥಿರತೆ, ಹುಲ್ಲಿನಿಂದ ಅಚಲತೆ. ಹಿರಿಯರಿಂದ ಜೀವನವ ಅನುಭವ ಪಾಠ. ನಕ್ಷತ್ರದಿಂದ ಸ್ವ-ಅರಿವಿನ ಸಾಕ್ಷತ್ಕಾರ. ಅಷ್ಟೇ ಏಕೆ ಸೂಜಿ- ದಾರದಿಂದ, ಸೇತುವೆಯಿಂದ ಒಗ್ಗೂಡುವ ಪಾಠ. ಹೀಗೆಯೇ ಪ್ರತಿಯೊಂದರಲ್ಲಿ ಅರಿಯುವ ಮನವಿದ್ದರೆ ಸಾಕು, ಪ್ರಕೃತಿಯಲ್ಲಿ ಪ್ರತಿ ವಸ್ತುವು ಆಯಾ ಸಮಯಕ್ಕೆ ಗುರುವಾಗಿ ತಿಳುವಳಿಕೆ ಮೂಡಿಸುವುದು.

**"ನ ಗುರೋರಧಿಕಂ ತತ್ವಂ, ನ ಗುರೋರಧಿಕಂ ತಪಃ।**
**ತತ್ತ್ವ ಜ್ಞಾನಾತ್ ಪರಂ ನಾಸ್ತಿ , ತಸ್ಮೈ ಶ್ರೀಗುರವೇ ನಮಃ**
॥(ಗುರುಗೀತಾ ಪುಸ್ತಕದಿಂದ) ಅಂದರೆ ಗುರುವಿಗಿಂತ ಅಧಿಕವಾಗಿ ತತ್ತ್ವವಿಲ್ಲ, ಗುರುವಿಗಿಂತ ಅಧಿಕವಾದ ತಪಸ್ಸಿಲ್ಲ. ತತ್ತ್ವ ಜ್ಞಾನಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ, ಅದನ್ನು ತಿಳಿಸುವ ಪ್ರತಿ ಗುರುವಿಗೂ ನಮನಗಳು. ಗುರುಪೂರ್ಣಿಮೆಯ ಶುಭಾಶಯಗಳು.

– **ಲೀಲಾವತಿ ವಿಜಯಕುಮಾರ** ಅಂಕಸಮುದ್ರ

# ಇಂದು ಗುರು ಪೂರ್ಣಿಮಾ
## ಆಷಾಡ ಮಾಸದ ಹುಣ್ಣಿಮೆಯ ದಿನ



**ಗುರುಬ್ರಹ್ಮ ಗುರುವಿಷ್ಣು**
**ಗುರುದೇವೋ ಮಹೇಶ್ವರ**
**ಗುರುಸಾಕ್ಷಾತ್ ಪರಬ್ರಹ್ಮ**
**ತಸ್ಮೈ ಶ್ರೀ ಗುರುವೇ ನಮಃ**

ಈ ಸಾಲುಗಳೇ ಗುರುವಿನ ಮಹತ್ವವನ್ನು ಸಂಪೂರ್ಣವಾಗಿ ತಿಳಿಸಿಬಿಡುತ್ತವೆ. ಎಲ್ಲಾ ಮಕ್ಕಳಿಗೂ ತಾಯಿ ತಂದೆಯೇ ಮೊದಲ ಗುರು. ಮನೆಯ ಮೊದಲ ಪಾಠ ಶಾಲೆ ತನ್ನ ಮಕ್ಕಳಿಗೆ ಮೊದಲನೆಯ ಶಿಕ್ಷಕಿ ತಾಯಿ. ಇಲ್ಲಿ ಗುರುವೇ ಎಲ್ಲವೂ ಮತ್ತು ಅವರಿಂದಲೇ ಎಲ್ಲವೂ ಅನ್ನುವುದು ಸ್ಪಷ್ಟವಾಗುತ್ತದೆ. ಗುರುವಿನ ಸ್ಥಾನ ತುಂಬಾ ಪವಿತ್ರವಾದದ್ದು, ಜವಬ್ದಾರಿಯುತವಾದದ್ದು. ಈ ಸಮಾಜಕ್ಕೆ ಉತ್ತಮ ನಾಗರಿಕರನ್ನು ಕೊಡುವ ಸೃಷ್ಟಿಕರ್ತರು ಗುರು. ಮನುಷ್ಯನಾದ ಮೇಲೆ ತನ್ನ ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆಂದುಕೊಂಡಿರುತ್ತಾರೆ. ಗುರಿ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದವರು ಗುರು. 'ಮುಂದೆ ಗುರಿ ಇರಬೇಕು ಹಿಂದೆ ಗುರು ಇರಬೇಕು' ಅನ್ನೋ ಗಾದೆ ಮಾತು ತುಂಬಾ ಅರ್ಥಪೂರ್ಣವಾಗಿದೆ. ವಿದ್ಯಾರ್ಥಿಗಳು ತಮ್ಮ ಗುರಿಯನ್ನು.. ತಲುಪ ಬೇಕೆಂದರೆ ಗುರುವಿನ ಸಲಹೆ, ಸಹಕಾರ ಮತ್ತು ಮಾರ್ಗದರ್ಶನ ಇರಲೇಬೇಕು. ಗುರುಗಳ ಸಹಾಯದಿಂದ ಮಾತ್ರ ನಾವು ಅಂದುಕೊಂಡ ಗುರಿ ತಲುಪಬಹುದು. ಗುರುವೇಂದರೆ ಕೇವಲ ಶಿಕ್ಷಕರಲ್ಲ ಜೀವನದಲ್ಲಿ ಸರಿಯಾದ ದಾರಿ ತೋರುವ ಪ್ರತಿಯೊಬ್ಬರೂ ಗುರುಗಳೇ ಆಗಿರುತ್ತಾರೆ.



– **ವಿ.ಎಂ.ಎಸ್.ಗೋಪಿ**
ಲೇಖಕರು, ಸಾಹಿತಿಗಳು ಬೆಂಗಳೂರು

## ಕವಿ ಮನಸು

### ಹಂಪಿ ಟೈಮ್ಸ್ ದಿನಪತ್ರಿಕೆ

ನಾಡ ನುಡಿಯ ಪ್ರತಿಬಿಂಬಿಸುವ
ನಾಡಸಿರಿಯ ಪ್ರದರ್ಶಿಸುವ
ನಾಡ ಹಿರಿಮೆ ಹೆಚ್ಚಿಸುವ
ನಾಡ ಹೃದಯವಂತಿಕೆ ಚಿತ್ರಿಸುವ
ಹಂಪಿ ಟೈಮ್ಸ್ ದಿನಪತ್ರಿಕೆ

ನವ್ಯ ಸಾಹಿತ್ಯ ಕವನಗಳಿಗೆ
ಲೇಖನ ಕಥೆಗಳಿಗೆ ದಾರಿ ಮಾಡಿ
ವಿಜ್ಞಾನ ಕಡೆಗೆ ಬೆಳಕು ಚೆಲ್ಲುವ
ಶಿಕ್ಷಣ ಕ್ಷೇತ್ರಕ್ಕೆ ಹೊತ್ತು ಕೊಡುವ
ಹಂಪಿ ಟೈಮ್ಸ್ ದಿನಪತ್ರಿಕೆ

ನಾಡಿನ ರೈತ ಕಾರ್ಮಿಕರ
ಕೂಲಿಕಾರರ ಶ್ರಮ ದುಡಿಮೆ
ನೋವು ನಲಿವುಗಳ ಚಿತ್ರಿಸಿ
ಪರಿಹಾರ ಕಾಣಿಸುವ
ಹಂಪಿ ಟೈಮ್ಸ್ ದಿನಪತ್ರಿಕೆ

ಸೂರ್ಯೋದಯದ
ಸಮಯದಲ್ಲಿ
ಪ್ರತಿ ಮನೆಯಲ್ಲಿ ವಾಟ್ಸಪ್
ಸುದ್ದಿಯೊಂದಿಗೆ ಕಾಣಿಸುವ
ಹಂಪಿ ಟೈಮ್ಸ್ ದಿನಪತ್ರಿಕೆ

– ಜಿ ಆರ್ ಬಸವರಾಜೇಶ್ವರಿ
ಸರ್ಕಾರಿ ಪ್ರೌಢಶಾಲೆ, ಹಗರಿಗಜಾಪುರ

### ನಮ್ಮವನೆ ಅಲ್ಲವೇನು



ಕೊಡಲಿಯೊಂದು ಹಲವು
ಮರವ ಕಡಿದು ಹಾಕಿತು
ಉಳಿದ ಮರಗಳೆಲ್ಲ ಕೂಡಿ
ಸಭೆಯ ಕರೆಯಿತು

ಕೊಡಲಿಗೆ ಏನು ಶಿಕ್ಷೆ ಎಂಬ
ಕುರಿತು ಚರ್ಚೆಯಾಯಿತು
ಹರೆಯದಲ್ಲಿ ಇರುವ ಮರವು
ಗಲ್ಲು ಶಿಕ್ಷೆ ಸಲಹೆ ನೀಡಿತು

ಮಧ್ಯ ವಯಸ್ಸಿನ ಮರವು
ಮತ್ತೆ ಯೋಚಿಸಿ ಎಂದಿತು
ತುಂಬಾ ಗಹನ ವಿಷಯವಿದು
ಹಿರಿಯರಂಗಳಕೆ ಹಾಕಿರೆಂದಿತು

ಸಭಿಕರಲ್ಲೊಬ್ಬಾತ ಎದ್ದು ನಿಂತು
ಮಾತನಾಡಿದ, ಮರವ ಕಡಿದಾತ
ಮನುಜನಲ್ಲವೇ ಎಂದನಾತ
ಕೊಡಲಿ ತಪ್ಪು ಏನು ಇಲ್ಲನೆಂದನಾತಾ

ಅಷ್ಟರಲ್ಲಿ ಹಿರಿಯನೊಬ್ಬ ಎದ್ದು ನಿಂದ
ವಾದ ವಿವಾದವೇಕೆ ನಮ್ಮಲಿ ಎಂದ
ಮನುಜ ಕೊಡಲಿ ಬೇರೆಯಾದರೇನು
ಕೊಡಲಿ ಕಾವು ನಮ್ಮವನೇ ಅಲ್ಲವೇನು

ಸುಮ್ಮನೇಕೆ ವ್ಯರ್ಥ ಚರ್ಚೆಯು
ಕೊಡಲಿ ಜೊತೆಗೆ ಕಾವು ರಕ್ಷೆಯು
ಬೇಡ ಕೊಡಲಿಗೆ ಘೋರ ಶಿಕ್ಷೆಯು
ಹೇಳಿ ಎಲ್ಲ ಸಭೆಗೆ ಅಂತ್ಯವು

– ಕೆ ಎಂ ಬಸವರಾಜ ಹೊಸಪೇಟೆ

## ತಾಲೂಕಿನ ವಕೀಲರು ಸಭೆಗೆ ಹಾಜರಾಗುವಂತೆ ಕರೆ :ಬಾವಿಕಟ್ಟಿ ಶಿವಾನಂದ

**ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ತಾಲೂಕಿನ ವಕೀಲರ ಸಂಘದ ನೊಂದಣಿ ಹಾಗೂ ಸದ್ರಿ ತಾಲೂಕಿನಲ್ಲಿ ಜೆ.ಎಂ. ಎಫ್.ಸಿ ನ್ಯಾಯಾಲಯ ಸ್ಥಾಪನೆ ಕುರಿತಂತೆ ಚರ್ಚಿಸಲು ಜುಲೈ–21 ಭಾನುವಾರ ಬೆಳಿಗ್ಗೆ 11 ಗಂಟೆಗೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಭೆ ಕರೆಯಲಾಗಿದ್ದು ತಾಲೂಕಿನ ಎಲ್ಲಾ ವಕೀಲ ಮಿತ್ರರು ಸಭೆಯಲ್ಲಿ ಪಾಲ್ಗೊಂಡು ವಕೀಲ ಸಂಘದ ಅಭಿವೃದ್ಧಿಗೆ ತಮ್ಮ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಬೇಕೆಂದು ಬಾವಿಕಟ್ಟಿ ಶಿವಾನಂದ ವಕೀಲರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಶೀಘ್ರದಲ್ಲೇ ಜಲಾಶಯದ ಗೇಟ್ ರಿಪೇರಿಯಾಗಲಿವೆ

### ಶಾಸಕ ಕೆ.ನೇಮಿರಾಜ್‌ನಾಯ್ಕ್ ಹೇಳಿಕೆ | ಮಾಲವಿ ಜಲಾಶಯಕ್ಕೆ ನೀರು



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿಗೆ ಹೊಂದಿಕೊಂಡು ಹರಿಯುತ್ತಿರುವ ತುಂಗಾಭದ್ರ ನದಿ ತುಂಬಿ ಹರಿಯುತ್ತಿದ್ದು, ನದಿಯ ಜಾಕ್‌ವೆಲ್‌ನಿಂದ ತಾಲೂಕಿನ ಮಾಲವಿ ಜಲಾಶಯಕ್ಕೆ ನೀರು ಸರಬರಾಜು ಹಿನ್ನೆಲೆಯಲ್ಲಿ ಮಠಾಧೀಶರೊಂದಿಗೆ ಶಾಸಕ ಕೆ.ನೇಮಿರಾಜ್ ನಾಯ್ಕ್ ಶನಿವಾರ ಚಾಲನೆ ನೀಡಿದರು.

ಶಾಸಕ ಕೆ.ನೇಮಿರಾಜ್‌ನಾಯ್ಕ್ ಮಾತನಾಡಿ, ಮಳೆಗಾಲದ ಹಿನ್ನೆಲೆಯಲ್ಲಿ ನದಿಯ ಮೇಲ್ಭಾಗದಲ್ಲಿ ಉತ್ತಮ ಮಳೆಯಾಗುತ್ತಿದ್ದು, ಹಡಗಲಿ ತಾಲೂಕಿನ ರಾಜವಾಳದ ಬಳಿ ನಿರ್ಮಾಣಮಾಡಲಾದ ಜಾಕ್‌ವೆಲ್ ನಿಂದ ತಾಲೂಕಿನ ಬಹುದಿನದ ಬೇಡಿಕೆಯಾದ ಮಾಲವಿ ಜಲಾಶಯಕ್ಕೆ ನೀರು ತುಂಬಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಇದಕ್ಕೂ ಮೊದಲು ಅನೇಕ ಶಾಸಕರು ಶಾಶ್ವತ ನೀರಿಗಾಗಿ ಹೋರಾಟಮಾಡಿದ್ದರು. ಅವರೊಂದಿಗೆ ತಾಲೂಕಿನ ಅನೇಕ ಸಂಘಟನೆಗಳು ಮಾಳವಿ ಜಲಾಶಯದ ನೀರಿಗಾಗಿ ಹೋರಾಟಮಾಡಿಕೊಂಡು ಬಂದವರಾಗಿದ್ದರು. ಬಳಿಕ ಈ ಹಿಂದೆ ನಮ್ಮ ಬಿಜೆಪಿ ಸರ್ಕಾರದಲ್ಲಿ ಬಸವರಾಜ್ ಬೊಮ್ಮಾಯಿಯವರು ನೀರಾವರಿ ಮಂತ್ರಿಯಾಗಿರುವಾಗ ಈ ಯೋಜನೆಗೆ ಪ್ರಸ್ತಾವನೆ ಕಳಿಸಿಕೊಡಲಾಗಿದ್ದು, ಬಳಿಕ ಬದಲಾದ ಸರ್ಕಾರದಲ್ಲಿ ಜಿಲ್ಲೆಯ ಉಸ್ತುವಾರಿ ಸಚಿವರು ಹಾಗೂ ಹಡಗಲಿ ಕ್ಷೇತ್ರದ ಶಾಸಕರಾದ ಪಿ.ಟಿ.ಪರಮೇಶ್ವರನಾಯ್ಕ್ ಈ ಯೋಜನೆಗೆ ಮರುಜೀವ ನೀಡುವ ಮೂಲಕ ಮತ್ತೇ ಮುನ್ನೆಲೆಗೆ ಬಂದು ಶಾಶ್ವತ ನೀರು ಬರಲು ಸಾಧ್ಯವಾಯಿತು. ವಿಯ ತಿಳಿಯದವರು ಗೇಟ್‌ಗಳ ರಿಪೇರಿ ಯಾವಾಗ ಎಂದು ಪ್ರಶ್ನಿಸುತ್ತಾ ತಿರುಗುತ್ತಿದ್ದಾರೆ. ಆದರೆ, ಈಗಾಗಲೆ ಕಾಮಗಾರಿಗೆ 4,2,72000 ರೂ.ಗಳ ಟೆಂಡರ್‌ಕೂಡ ಮುಗಿದಿದ್ದು ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ ಎಂದರು. ಮಾಲವಿ ಜಲಾಶಯಕ್ಕೆ ಶೇ.70ರಷ್ಟು ಮಳೆಯಿಂದ ನೀರು ಹರಿದು ಬಂದರೆ ಶೇ.30ರಷ್ಟು ಈ ಯೋಜನೆಯಿಂದ ತುಂಬಲಿದೆ. ಇದರಿಂದ ರೈತರಿಗೂ ಅನುಕೂಲವಾಗಲಿದೆ ಎಂದರು. ರಾಜಕೀಯ ಮುಖಂಡರು ಹಾಗೂ ಕಾರ್ಯ ಕರ್ತರು ಮತ್ತು ಮಾಲವಿ ಜಲಾಶ ವ್ಯಾಪ್ತಿಯ ಫಲಾನುಭವಿ ರೈತರು, ಅಧಿಕಾರಿಗಳು ಇದ್ದರು.

> ರಾಜ್ಯದ ಬೇರೆಲ್ಲೆಡೆ ಉತ್ತಮ ಮಳೆಯಾಗಿದ್ದರೂ, ಈ ನಮ್ಮ ತಾಲೂಕಿನಲ್ಲಿ ಬಹುತೇಕ ಮಳೆಯ ಕೊರತೆ ಕಂಡಿದ್ದೇವೆ. ಆದರೂ ಜಲಾನಯನದ ಪ್ರದೇಶದಿಂದ ಹರಿದು ಬರುತ್ತಿರುವ ನೀರನ್ನು ಮಾಲವಿ ಜಲಾಶಯಕ್ಕೆ ಶಾಶ್ವತ ನೀರು ತುಂಬಿಸುವ ಕಾರ್ಯಕ್ಕೆ ಶಾಸಕರು ಚಾಲನೆ ನೀಡಿರುವು, ರೈತರಿಗೆ ತುಂಬಾ ಅನುಕೂಲವಾಗಲಿದೆ.
> – ಮಹೇಶ್ವರ ಸ್ವಾಮೀಜಿ,
> ನಂದಿಪುರ ಕ್ಷೇತ್ರ.

> ಮಾಲವಿ ಜಲಾಶಯಕ್ಕೆ ಶಾಶ್ವತ ನೀರು ತುಂಬಿಸುವ ಯೋಜನೆಗೆ ಸಿಕ್ಕಿರುವ ಚಾಲನೆಯಂತೆ. ಈ ಕ್ಷೇತ್ರದ ಅನೇಕ ನೀರಾವರಿ ಯೋಜನೆಗಳಿಗೂ ಚಾಲನೆ ನೀಡಬೇಕಾಗಿದೆ. ಕೂಡಲೆ ಸರ್ಕಾರದ ಮನವೊಲಿಸಿ ಯೋಜನೆಗಳಿಗೆ ಚಾಲನೆ ದೊರೆಯಲಿ ರೈತರ ಬಾಳು ಹಸನಾಗಲಿ.
> –ಮಲ್ಲಿಕಾರ್ಜುನ ಸ್ವಾಮೀಜಿ,
> ಮರಿಯಮ್ಮನಹಳ್ಳಿ

## ಟಿಬಿಡ್ಯಾಂಗೆ ಒಂದೇ ದಿನದಲ್ಲಿ ಬಂತು 13 ಟಿಎಂಸಿ ನೀರು




## ಯುವನಿಧಿ ಯೋಜನೆ : ಪ್ರತಿ ತಿಂಗಳು 25 ರೊಳಗೆ ನಿರುದ್ಯೋಗಿ ಪ್ರಮಾಣ ಪತ್ರ ಸಲ್ಲಿಸಲು ಸೂಚನೆ

**ಹಂಪಿ ಟೈಮ್ಸ್ ಬಳ್ಳಾರಿ**

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ "ಯುವನಿಧಿ" ಕಾರ್ಯಕ್ರಮ (ಪದವಿ ಉತ್ತೀರ್ಣರಾದವರಿಗೆ ರೂ.3,000 ಮತ್ತು ಡಿಪ್ಲೋಮಾ ಉತ್ತೀರ್ಣರಾದವರಿಗೆ ರೂ.1,500) ವನ್ನು ನೀಡುತ್ತಿದ್ದು, ಯೋಜನೆಯ ಪ್ರಯೋಜನವನ್ನು ಪಡೆಯಲು ಸೇವಾ ಸಿಂಧು ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬಹುದು.

**ಅರ್ಹತೆ:**

2023 ರಲ್ಲಿ ಪದವಿ, ಡಿಪ್ಲೋಮಾ ಉತ್ತೀರ್ಣರಾಗಿಬೇಕು. ಪದವಿ, ಡಿಪ್ಲೋಮಾ ನಂತರ ಕನಿಷ್ಠ 6 ತಿಂಗಳ ಅವಧಿಯವರೆಗೆ ಸರ್ಕಾರಿ, ಖಾಸಗಿ ಉದ್ಯೋಗ ಹೊಂದಿರ ಬಾರದು. ಸ್ವಯಂ ಉದ್ಯೋಗ ಹೊಂದಿರಬಾರದು. ಉನ್ನತ ವಿದ್ಯಾಭ್ಯಾಸ ಮುಂದುವರಿಸಿರಬಾರದು.

ಕರ್ನಾಟಕದಲ್ಲಿ ವಾಸವಿರುವವರು (ಕನಿಷ್ಠ 6 ವರ್ಷಗಳವರೆಗೆ ಪದವಿ, ಡಿಪ್ಲೋಮಾದವರೆಗೆ ಅಧ್ಯಯನ ಮಾಡಿರಬೇಕು.

.ಈಗಾಗಲೇ ಈ ಯೋಜನೆಯ ಪ್ರಯೋಜನ ಪಡೆಯುತ್ತಿರುವವರು ಪ್ರತಿ ತಿಂಗಳು 25ನೇ ತಾರೀಖಿನ ಒಳಗಾಗಿ ಸ್ವಯಂ ದೃಢೀಕೃತ ನಿರುದ್ಯೋಗಿ ಪ್ರಮಾಣ ಪತ್ರವನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿದೆ.

ಯಾವುದೇ ತಿಂಗಳು ತಮಗೆ ನಿರುದ್ಯೋಗ ಭತ್ಯೆ ಸಂದಾಯವಾಗದಿದ್ದರೆ ತಮ್ಮ ಮೂಲ ದಾಖಲೆಗಳನ್ನು ಈ ಕೆಳಕಂಡ ಕಚೇರಿಗಳಲ್ಲಿ ಪರಿಶೀಲನೆಗೆ ಒಳಪಡಿಸಬೇಕು.

ಡಿಡಿಪಿಐ ಕಚೇರಿಯಲ್ಲಿ ಎಸ್‌ಎಸ್‌ಎಲ್‌ಸಿ ಪ್ರಮಾಣ ಪತ್ರ, ಡಿಡಿಪಿಯು ಕಚೇರಿಯಲ್ಲಿ ದ್ವಿತೀಯ ಪಿಯುಸಿ ಪ್ರಮಾಣ ಪತ್ರ ಹಾಗೂ ಡಿಪ್ಲೋಮಾ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಗೆ ಭೇಟಿ ನೀಡಿ ತಮ್ಮ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ಮೊ.8861866752 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ಹಟ್ಟಪ್ಪ ತಿಳಿಸಿದ್ದಾರೆ.

## ಮೀನುಗಾರಿಕೆ ಸೌಲಭ್ಯ ಹೊಂದಿ : ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ

**ಹಂಪಿ ಟೈಮ್ಸ್ ಬಳ್ಳಾರಿ**

ಮೀನುಗಾರರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಮೀನುಗಾರಿಕೆ ಇಲಾಖೆಯಿಂದ ಸಿಗಬಹುದಾದ ಸೌಲಭ್ಯಗಳನ್ನು ಬಳಕೆ ಮಾಡಿಕೊಳ್ಳಬೇಕು ಎಂದು ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ ಹೇಳಿದರು.

ಶನಿವಾರ, ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಜಿಲ್ಲಾ ಪಂಚಾಯತ್ ಕಾರ್ಯಕ್ರಮದಡಿ ನಿರ್ಮಾಣ ಮಾಡಲಾದ ಅಮೃತ ಸರೋವರ ಕೊಳಗಳಲ್ಲಿ ಮೀನು ಮರಿಗಳನ್ನು ದಾಸ್ತಾನು ಮಾಡಿ ಮೀನು ಉತ್ಪಾದನೆಯನ್ನು ಹೆಚ್ಚಿಸುವಂತೆ ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶಿಸಿ, ಮೀನು ಕೃಷಿಕರು ಯೋಜನೆಯನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ಅಧಿಕಾರಿಗಳು ಇದ್ದರು.

# ಸಾರ್ವಜನಿಕರ ಬೇಡಿಕೆಯಂತೆ ಬೆಂಗಳೂರಿಗೆ ಡೇ ಬಸ್

### ಸಾರಿಗೆ ಸಂಚಾರಕ್ಕೆ ಶಾಸಕ ಕೆ.ನೇಮಿರಾಜ್‌ನಾಯ್ಕ್ ಚಾಲನೆ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನ ಹಾಗೂ ಕ್ಷೇತ್ರದ ಒತ್ತಾಸೆಯಂತೆ ಪಟ್ಟಣದಿಂದ ನಿತ್ಯ ಬೆಳಗ್ಗೆ 5.45ಕ್ಕೆ ಬೆಂಗಳೂರಿಗೆ ಹೊರಡುವ ಸಾರಿಗೆ ಬಸ್‌ಗೆ ಘಟಕದಿಂದ ಶಾಸಕ ಕೆ.ನೇಮಿರಾಜ್‌ನಾಯ್ಕ್ ಶನಿವಾರ ಚಾಲನೆ ನೀಡಿದರು.

ಪಟ್ಟಣದ ಕೆ.ಎಸ್.ಆರ್.ಟಿ.ಸಿ ಘಟಕದ ಆವರಣದಲ್ಲಿ ಬೆಂಗಳೂರಿಗೆ ಹೋಗಲು ಶೃಂಗಾರಗೊಂಡ ಬಸ್‌ಗೆ ಮಠಾಧೀಶರೊಂದಿಗೆ ಚಾಲನೆ ನೀಡಿದ ಅವರು ಮಾತನಾಡಿ, ಇದೇ ಘಟಕದಿಂದ ತಾಲೂಕಿನ ಮುತ್ಕೂರು–ಬೆಂಗಳೂರು ಬಸ್ ರಾತ್ರಿ ಹೋಗುತ್ತಿದ್ದು, ಸಾರ್ವಜನಿಕರು ದಿನದ ಬೆಳಗ್ಗೆ ಒಂದು ಬಸ್ ಬೆಂಗಳೂರಿಗೆ ಹೋಗುವ ಅವಶ್ಯವಿದ್ದು, ಬಹುದಿನಗಳಿಂದ ಬೇಡಿಕೆಯನ್ನು ಸಹ ಸಲ್ಲಿಸಿದ್ದರು. ಅವರ ಬೇಡಿಕೆಗನುಗುಣವಾಗಿ ಇಂದು ಬಸ್ ಸಂಚಾರ ಆರಂಭವಾಗಿದೆ. ಉತ್ತಮ ಸೇವೆ ಸಲ್ಲಿಸುವ ಜೊತೆಗೆ ಘಟಕಕ್ಕೆ ಉತ್ತಮ ಲಾಭವನ್ನು ತಂದುಕೊಡಲಿ ಎಂದರು.

ಘಟಕದ ವ್ಯವಸ್ಥಾಪಕ ನೀಲಪ್ಪ ಮಾತನಾಡಿ, ಬೆಳಗ್ಗೆ 5.45ಕ್ಕೆ ಹೊರಡುವ ಬಸ್ ಎಂದಿನಂತೆ ಕೊಟ್ಟೂರು, ಉಜ್ಜಿನಿ, ಚಿತ್ರದುರ್ಗ ಮಾರ್ಗವಾಗಿ, ಮಧ್ಯಾಹ್ನ 12.30ಕ್ಕೆ ಬೆಂಗಳೂರು ತಲುಪಲಿದೆ. ಬಳಿಕ ಅಲ್ಲಿಂದ 2.30ಕ್ಕೆ ಹೊರಟು ಅದೇ ಮಾರ್ಗವಾಗಿ ಪಟ್ಟಣಕ್ಕೆ ಮರಳಲಿದೆ ಎಂದರು.

ಈ ವೇಳೆ ಮರಿಯಮ್ಮನಹಳ್ಳಿ ಮಲ್ಲಿಕಾರ್ಜುನ ಸ್ವಾಮೀಜಿ, ಶ್ರೀಹಾಲಸ್ವಾಮಿ ಮಠದ ಹಾಲಸಿದ್ದೇಶ್ವರ ಸ್ವಾಮೀಜಿ, ಗದ್ದಿಕರೆ ಚರಂತೇಶ್ವರ ಸ್ವಾಮೀಜಿ, ಪುರಸಭೆ ಸದಸ್ಯರಾದ ದೀಪಕ್ ಕಠಾರೆ, ವಿ.ವೀರಣ್ಣ, ಜೆಡಿಎಸ್ ತಾಲೂಕು ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಜಿಲ್ಲಾ ಉಪಾಧ್ಯಕ್ಷ ಕೃಷ್ಣಮೂರ್ತಿ ಶೆಟ್ರು, ಪಾಂಡುನಾಯ್ಕ್, ಸಂಚಿ ಶಿವಕುಮಾರ್, ಸರ್ದಾರ್ ಯಮನೂರ, ಇತರರಿದ್ದರು.

## ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ 583 276, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ
E-mail: registrar@kannadauniversity.org

### ಅನುಪಯುಕ್ತ ವಾಹನಗಳ ಹರಾಜು ಪ್ರಕಟಣೆ

ಕನ್ನಡ ವಿಶ್ವವಿದ್ಯಾಲಯದ ಅವರಣದಲ್ಲಿ ಅನುಪಯುಕ್ತ ವಾಹನಗಳನ್ನು ದಿನಾಂಕ 30–07–2024ರಂದು ಮಂಗಳವಾರ ಮಧ್ಯಾಹ್ನ 2.30 ಗಂಟೆಗೆ ಬಹಿರಂಗ ಹರಾಜು ಪ್ರಕ್ರಿಯೆ ಕೈಗೊಳ್ಳಲಾಗುವುದು. ಇಚ್ಛಿತ ಸವಾಲುದಾರರು ರೂ:2000.00ಗಳನ್ನು ಹಣಕಾಸು ಅಧಿಕಾರಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಹೆಸರಿಗೆ ಡಿ.ಡಿ. ಪಡೆದು ದಿನಾಂಕ 30–07–2024 ರಂದು ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು. ಯಶಸ್ವಿ ಸವಾಲುದಾರರು ಸವಾಲಿನ ಪೂರ್ತಿ ಮೊತ್ತದಲ್ಲಿ ಶೇ.25ರಷ್ಟು ಮೊತ್ತವನ್ನು ಆ ದಿನವೇ ಪಾವತಿಸಿ ಇನ್ನುಳಿದ ಮೊತ್ತವನ್ನು ಏಳು ದಿನಗಳ ಒಳಗಾಗಿ ಪಾವತಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

ದಿನಾಂಕ: 20.07.2024
ಸ್ಥಳ: ವಿದ್ಯಾರಣ್ಯ

ಸಹಿ
ಕುಲಸಚಿವರು

## ಫಾರಂ ನಂ.8
## 38ನೇ ರೂಲ್ (2) (ಡಿ)ನೇಯ ಕಲಂ
## ದಾವ ಸಂಖ್ಯೆ : ಅನಿ(ವ & ಇ) ಡಿ–6/ಡಿಐಎಸ್/158/2015–16
## ಇ.ಪಿ. ಸಂಖ್ಯೆ ಸನಿ23/05/2016–17

1) ಶ್ರೀ ಹೆಚ್. ವೀರಭದ್ರಪ್ಪ ಬಿನ್ ತಂದೆ ಹೆಚ್. ಭರ್ಮಪ್ಪ (ಪೌತಿ) ವಾರಸುದಾರರಾದ 2) ಶ್ರೀಮತಿ ಹಾಲಮ್ಮ ಕೋಂ ಲೇಟ್ ಹೆಚ್. ವೀರಭದ್ರಪ್ಪ, 3) ಶ್ರೀ ಹಾಲೇಶ್ ಕುಮಾರ್ ಬಿನ್ ಲೇಟ್ ಹೆಚ್. ವೀರಭದ್ರಪ್ಪ, 4) ಶ್ರೀ ಸಂತೋಷ್ ಕುಮಾರ್ ಬಿನ್ ಲೇಟ್ ಹೆಚ್. ವೀರಭದ್ರಪ್ಪ, ಖಾತ ನಂ.100, ಕಡಲಬಾಳು ಗ್ರಾಮ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ ಇವರು ಬಾಪೂಜಿ ನಗರ ಅರ್ಬನ್ ಗೃಹ ನಿರ್ಮಾಣ ಸಹಕಾರ ಸಂಘ ನಿ., ಹಗರಿಬೊಮ್ಮನಹಳ್ಳಿ ಈ ಸಂಘದ ಮೂಲಕ ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ., ಬೆಂಗಳೂರು ಇವರಿಂದ ಪಡೆದ ಗೃಹ ನಿರ್ಮಾಣ ಸಾಲ ಮತ್ತು ಗೃಹ ಅಭಿವೃದ್ಧಿ ಸಾಲದ ಬರತಕ್ಕ ಬಾಬ್ತು ರೂ.9,87,991/– ಗಳನ್ನು ದಿನಾಂಕ: 30.06.2024 ರವರೆಗೆ ಸಂದಾಯದ ಬಗ್ಗೆ ಈ ಕೆಳಗೆ ಕಾಣಿಸಿರುವ ಸ್ಥಿರ ಸ್ವತ್ತನ್ನು 2024ನೇ ಇಸವಿ ಆಗಸ್ಟ್ ತಿಂಗಳ 21 ನೇ ತಾರೀಖು ಬುಧವಾರ ದಿವಸದಂದು ಹರಾಜು ಬೇರೆ ಯಾವ ತಾರೀಖಿಗೆ ಮುಂದುವರಿಸಿ ಇಡಲ್ಪಡುತ್ತದೋ ಆ ದಿವಸದಲ್ಲಿ ಸಾಲಗಾರರ ಸ್ವತ್ತಿನ ಮುಂಭಾಗ ಅಂದರೆ ವಿಜಯನಗರ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಕಡಲಬಾಳು ಗ್ರಾಮ, ಖಾತ ನಂ.100ರಲ್ಲಿ ಇರುವ ಮನೆ ಮತ್ತು ಸ್ವತ್ತನ್ನು ಬಹಿರಂಗವಾಗಿ ಹರಾಜು ಮೂಲಕ ಮಾರಾಟ ಮಾಡಲಾಗುವುದು ಎಂಬುದಾಗಿ ಈ ಮೂಲಕ ತಿಳಿಸಲಾಗುತ್ತದೆ. ಸದರಿ ಹರಾಜು ಬೆಳಗ್ಗೆ 11.30 ಘಂಟೆಗೆ ಪ್ರಾರಂಭವಾಗಿ ಅತ್ಯಧಿಕ ಬಿಡ್ಡು ಮಾಡುವವರಿಗೆ ಸ್ವತ್ತನ್ನು ಖಾಯಂ ಮಾಡಿಕೊಡಲಾಗುತ್ತದೆ.

### ಮೇಲ್ಕಾಣಿಸಿದ ನಮೂನೆ 8 ಅನ್ನು ಪತ್ರಿಕಾ ಪ್ರಕಟಣೆ ಮೂಲಕ ನೋಟೀಸ್ ಜಾರಿ

1. ಬಿಡ್‌ದಾರರು ಬಿಡ್ಡು ಮಾಡಿದ ಮೊಬಲಗಿನ ಪೈಕಿ ಶೇಕಡಾ 15 ರಷ್ಟು ಮೊಬಲಗನ್ನು ಹರಾಜಿನ ಸಮಯದಲ್ಲಿ ಠೇವಣಿ ಕಟ್ಟತಕ್ಕದ್ದು ಮತ್ತು ಬಿಡ್ಡು ಮಾಡಿದ ಉಳಿದ ಬಿಡ್ ಹಣವನ್ನು ಮಾರಾಟದ ದಿನಾಂಕದಿಂದ 45 ದಿವಸದೊಳಗಾಗಿ ಕೊಡದೆ ತಪ್ಪಿದರೆ ಅವರು ಠೇವಣಿ ಕಟ್ಟಿದ ಹಣವನ್ನು ಕಳೆದುಕೊಳ್ಳಲು ಬಾಧ್ಯರಾಗಿರುತ್ತಾರೆ.
2. ಮೇಲೆ ಹೇಳಿದ ಪ್ರಕಾರ ನಿರ್ಣಯಿಸಿದ ಸಮಯದ ಒಳಗೆ ಹಣವನ್ನು ಠೇವಣಿ ಕಟ್ಟದಿದ್ದರೆ ಅಥವಾ ಬಿಡ್ಡು ಮಾಡಿದ ಮೊಬಲಗಿನ ಪೈಕಿ ಉಳಿಕೆ ಹಣವನ್ನು ಕಟ್ಟದಿದ್ದರೆ ಪ್ರಥಮ ಬಿಡ್ಡುದಾರನ ಖರ್ಚು ಅಥವಾ ನಷ್ಟ ಬಾಧ್ಯತೆಯ ಮೇಲೆ ಮಾರಾಟದ ಹೊಸ ಇಸ್ತಿಹಾರನ್ನು ಪ್ರಕಟಿಸಿದ ನಂತರ ಸ್ವತ್ತನ್ನು ಪುನಃ ಮಾರಾಟ ಮಾಡಲಾಗುವುದು.
3. ವಿಕ್ರಯದ ಕಾಲದಲ್ಲಿ ಬಿಡ್ಡು ಮಾಡುವವರು ತಾವು ತಮ್ಮ ಸ್ವಂತಕ್ಕಾಗಿ ಬಿಡ್ಡು ಮಾಡುತ್ತಾರೋ ಅಥವಾ ಅನ್ಯರ ಪರವಾಗಿ ಬಿಡ್ಡು ಮಾಡುತ್ತಾರೋ ಎಂಬುದನ್ನು ತಿಳಿಸಬೇಕಾಗಿ ಅಪೇಕ್ಷಿಸಲ್ಪಡಬಹುದು. ಅನ್ಯರ ನಿಮಿತ್ತ ಬಿಡ್ಡು ಮಾಡುವ ಪಕ್ಷದಲ್ಲಿ ಬಿಡ್ಡುದಾರರು ಆ ಅನ್ಯರಿಂದ ಅವರ ಸಹಿ ತಾವು ಪಡೆದುಕೊಂಡಿರುವ ಅಧಿಕಾರ ಪತ್ರವನ್ನು ಹಾಜರು ಮಾಡುವಂತೆ ಅಪೇಕ್ಷಿಸಲ್ಪಡಬಹುದು. ಈ ಪ್ರಕಾರ ಹಾಜರು ಮಾಡದೇ ಇದ್ದರೆ ಅವರ ಬಿಡ್ಡುಗಳನ್ನು ತಿರಸ್ಕರಿಸಬಹುದು.
4. ಬಾಕೀದಾರರಾಗಲೀ ಅಥವಾ ಅವರ ಅಧೀನದಲ್ಲಿ ಕೆಲಸ ಮಾಡುವಂತ ಅಥವಾ ಜಪ್ತಿ ಮಾಡಲ್ಪಟ್ಟ ಸ್ವತ್ತುಗಳಲ್ಲಿ ಸಂಬಂಧ ಇರುವುದಾಗಿ ದಾವೆ ಮಾಡುವಂತೆ ಬೇರೆಯವರಾಗಲೀ ಬಡ್ಡಿ ಮತ್ತು ಇತರೆ ಖರ್ಚುಗಳ ಸಮೇತ ಪೂರಾ ಮೊಬಲಗನ್ನು ಹಾಜರು ಮಾಡಿದರೆ ಹರಾಜನ್ನು ನಿಲ್ಲಸತಕ್ಕದ್ದು. ಪರಂತು ಈ ಪ್ರಕಾರ ಹಾಜರು ಮಾಡುವಂಥದ್ದು ಹರಾಜಿಗೆ ನಿಶ್ಚಯಿಸಿದ ತಾರೀಖಿನ ಮೊದಲಿನಯ ದಿವಸದ ಸೂರ್ಯಾಸ್ತಮಾನಕ್ಕೆ ಮುಂಚೆಯಾಗಿರತಕ್ಕದ್ದು.
5. ಹರಾಜು ಸಹಕಾರ ಸಂಘಗಳ ಸಹಾಯಕ ನಿಭಂದಕರುರವರಿಂದ ಖಾಯಂ ಮಾಡಲ್ಪಡುವವರೆಗೆ ಖಾಯಂ ಆಗತಕ್ಕದ್ದಲ್ಲ ಮತ್ತು ಅಂಥಾ ಮಾರಾಟಕ್ಕೆ ಸಂಬಂಧಪಟ್ಟ ಯಾವುದೇ ವ್ಯವಹಾರದಿಂದ ಅನ್ಯಾಯ ಹೊಂದಿರುವ ಅಪೀಲುಗಳನ್ನು ದಾಖಲ್ಮಾಡುವರೆಗೆ ಅನುಕೂಲವಾಗುವಂತೆ ಹರಾಜಿನ ತಾರೀಖಿನಿಂದ ಅದನ್ನು ಮಂಜೂರು ಮಾಡುವ ಪರ್ಯಂತ ಮಧ್ಯಕಾಲದಲ್ಲಿ ಮೂವತ್ತು ದಿವಸಗಳ ಸಮಯವು ಕೊಡಲಾಗುವುದು. ಮಾರಾಟವು ಮಂಜೂರು ಆದ ನಂತರ ಮಾರಾಟದ ಹಣ ಪೂರ್ಣ ಪಾವತಿ ಮಾಡಿದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹೊಸಪೇಟೆ ಉಪ ವಿಭಾಗ, ಹೊಸಪೇಟೆ ಇವರ ಸಹಿ ಮತ್ತು ಮೊಹರುನೊಂದಿಗೆ ಮಾರಾಟದ ಸರ್ಟಿಫಿಕೇಟ್ ಸಂಬಂಧಿಸಿದವರಿಗೆ ಕೊಡಲಾಗುವುದು.
6. ಭೂಮಿಗಳ ವಿವರಣೆಯಲ್ಲಿ ಅಥವಾ ಅವುಗಳ ಅಂದಾಜು ಮಾಡಲಾದ ವಿಸ್ತೀರ್ಣದ ವಿಷಯದಲ್ಲಿ ಇರುವ ತಪ್ಪುಗಳನ್ನು ಕುರಿತು ಸರ್ಕಾರದವರು / ಸಂಘದವರು / ವಸತಿ ಮಹಾಮಂಡಲವು / ಮಾರಾಟಾಧಿಕಾರಿಗಳು ಜವಾಬ್ದಾರರಲ್ಲವೆಂಬುದನ್ನು ಚೆನ್ನಾಗಿ ತಿಳಿದಿರತಕ್ಕದ್ದು.

### ಮಾರಾಟದ ಸ್ವತ್ತಿನ ಷೆಡ್ಯೂಲ್ ಪಟ್ಟಿ

| ತಾಲೂಕು | ಗ್ರಾಮ | ಬಾಕಿದಾರರ ಹೆಸರು | ಮಾರಾಟ ಮಾಡುವ ಸ್ಥಿರ ಸ್ವತ್ತುಗಳ ವಿವರ | ಅಂದಾಜು ವಿಸ್ತೀರ್ಣ | ಎಷ್ಟು ಹಣದ ಬಗ್ಗೆ ವಸೂಲಿ | ಷರಾ |
|---|---|---|---|---|---|---|
| ಹಗರಿಬೊಮ್ಮನಹಳ್ಳಿ | ಕಡಲಬಾಳು | 1) ಶ್ರೀ ಹೆಚ್. ವೀರಭದ್ರಪ್ಪ ಬಿನ್ ತಂದೆ ಹೆಚ್. ಭರ್ಮಪ್ಪ (ಪೌತಿ) ವಾರಸುದಾರರಾದ 2)ಶ್ರೀಮತಿ ಹಾಲಮ್ಮ ಕೋಂ ಲೇಟ್ ಹೆಚ್. ವೀರಭದ್ರಪ್ಪ, 3) ಶ್ರೀ ಹಾಲೇಶ್ ಕುಮಾರ್ ಬಿನ್ ಲೇಟ್ ಹೆಚ್. ವೀರಭದ್ರಪ್ಪ, 4)ಶ್ರೀ ಸಂತೋಷ್ ಕುಮಾರ್ ಬಿನ್ ಲೇಟ್ ಹೆಚ್. ವೀರಭದ್ರಪ್ಪ, | ಖಾತ ನಂ.100, ಕಡಲಬಾಳು ಗ್ರಾಮ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ. | ಪೂರ್ವಕ್ಕೆ: ರಸ್ತೆ ಪಶ್ಚಿಮಕ್ಕೆ : ವೆಂಟಿ ಕೊಟ್ರಪ್ಪರವರ ಮನೆ. ಉತರಕ್ಕೆ: ಹೆಚ್. ಗುರುಸಿದ್ದಪ್ಪ ರವರ ಮನೆ. ದಕ್ಷಿಣಕ್ಕೆ: ಖಾಲಿ ನಿವೇಶನ ಪೂ–ಪ: 31.6 ಅಡಿ, ಉ–ದ: 18 ಅಡಿ. ಒಟ್ಟು 568.8 ಚ.ಅ | ದಿನಾಂಕ: 30.06.2024ಕ್ಕೆ ರೂ.9,87,991/– + ಬಡ್ಡಿ + ಜಾಹಿರಾತು ವೆಚ್ಚ + ಇತರೆ | |

ಮೊಕ್ಕಾಂ: ಹೊಸಪೇಟೆ
ತಾರೀಖು:20.07.2024.

ಸಹಿ/–
ಸಹಕಾರ ಸಂಘಗಳ ಸಹಾಯಕ ನಿಬಂಧಕರು
ಹೊಸಪೇಟೆ ಉಪವಿಭಾಗ, ಹೊಸಪೇಟೆ

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

**21–07–2024 – ಭಾನುವಾರ**

| | |
|---|---|
| ತಿಥಿ | : ಹುಣ್ಣುಮೆ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉತ್ತರಾಷಾಡ |
| ಯೋಗ | : ಚಿಷ್ಕುಂಭ |
| ಕರಣ | : ಭವ |
| ಸೂರ್ಯೋದಯ | : 05:54:06 |
| ಸೂರ್ಯಾಸ್ತ | : 19:12:28 |
| ರಾಹು | : 17:33–19:12 |
| ಯಮಘಂಡ | : 12:33–14:13 |
| ಗುಳಿಕ | : 15:53–17:33 |

## ತುಂಗಭದ್ರಾ ನೀರಿನ ಮಟ್ಟ



**ಶನಿವಾರ : 20–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1621.32 ಅಡಿ |
| ಒಳ ಹರಿವು | 107198 ಕ್ಯುಸೆಕ್ |
| ಹೊರ ಹರಿವು | 1267 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 65.110 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1591.77 ಅಡಿ |
| ಒಳ ಹರಿವು | 9536 ಕ್ಯುಸೆಕ್ |
| ಹೊರ ಹರಿವು | 245 ಕ್ಯುಸೆಕ್ |
| ಸಾಮರ್ಥ್ಯ | 12.574 ಟಿಎಂಸಿ |

## ಜುಲೈ 22ಕ್ಕೆ ವಿಶ್ವ ಮೆದುಳು ದಿನಾಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,ಕುಷ್ಠರೋಗನಿರ್ಮೂಲನಾಧಿಕಾರಿಗಳ ಕಚೇರಿ, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸ ಪೇಟೆ ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಲ್ಲಿಗೆ ಪ್ಯಾರಮೆಡಿಕಲ್ ಕಾಲೇಜ್ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಮೆದುಳು ದಿನಾಚರಣೆ ಅಂಗವಾಗಿ ಜುಲೈ 22ರಂದು ಬೆಳ್ಳಿಗೆ 9 ಗಂಟೆಗೆ ಮಾರ್ಕಂಡೇಶ್ವ ದೇವಸ್ಥಾನದಿದಂದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯವರೆಗೆ ಜನಜಾಗೃತಿ ಜಾಥಾ ಮತ್ತು ಆಸ್ಪತ್ರೆಯಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಶಂಕರ್ ನಾಯ್ಕ ಎಲ್. ಆರ್. ಅವರು ಜಾಥಾ ಮತ್ತು ಉದ್ಘಾಟನೆ ನೆರವೇರಿಸುವರು. ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗಳಾದ ಡಾ.ಎನ್.ಸಲೀಂ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಕುಷ್ಠರೋಗ ನಿರ್ಮಾಲನಾಧಿಕಾರಿ ಡಾ. ರಾಧಿಕಾ.ಕೆ ಪ್ರಾಸ್ತಾವಿಕ ಮಾತನಾಡುವರು. ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಫಿಜಿಷಿಯನ್ ಡಾ.ಸೋಮಶೇಖರ ಕೆ ವಿಶೇಷ ಉಪನ್ಯಾಸ ನೀಡುವರು. ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಜಂಬಯ್ಯ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿ ಡಾ. ಕಮಲಮ್ಮ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯ ಕ್ರಮ ಅನುಷ್ಠಾನ ಅಧಿಕಾರಿ ಡಾ.ವಿನಯ್, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಜಗದೀಶ ಪಾಟ್ಟೆ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಷಣ್ಮುಖ ನಾಯ್ಕ, ತಾಲೂಕು ಆರೋಗ್ಯಾಧಿ ಕಾರಿ ಡಾ.ಭಾಸ್ಕರ್.ಡಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಡಾ.ದೊಡ್ಡಮನಿ ಎಂ.ಪಿ, ಜಿಲ್ಲಾ ಸಂಯೋಜಕರು ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮದ ಗಿರೀಶ್ ಆರ್ ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join for to Get Daily E-paper

## ವ್ಯಾಸತೀರ್ಥರಿಂದ ಹಂಪಿಯಲ್ಲಿ ಸ್ಥಾಪಿತ ಸಂಸ್ಕೃತ ವಿಶ್ವವಿದ್ಯಾಲಯ

# ಲೋಕ ಪಾವನಿ ಗುರುಕುಲ

ಭಾರತದಲ್ಲಿ ಗುರುಕುಲಗಳ ಮೂಲಕ ವಿದ್ಯೆಯನ್ನು ಕಲಿಸುವ ಪದ್ಧತಿ ಪರಂಪರೆ ಸಾವಿರಾರು ವರ್ಷಗಳ ಹಿಂದಿನಿಂದಲೇ ನಡೆದುಕೊಂಡು ಬಂದಿತ್ತು. ವೈದಿಕ ಪದ್ಧತಿಯನ್ನು ಗುರುಕುಲಗಳಲ್ಲಿ ಬೋಧಿಸಲಾಗುತ್ತಿತ್ತು. ಕರ್ನಾಟಕದಲ್ಲಿಯೂ ಸಹ ಇದೇ ಪದ್ಧತಿ ಪರಂಪರೆ ನಡೆದುಕೊಂಡು ಬಂದಿತ್ತು. ಇವುಗಳನ್ನು ಅಗ್ರಹಾರ ಬ್ರಹ್ಮಪುರಿ ಘಟಿಕಾಸ್ಥಾನ ಎಂಬ ಮೊದಲಾದ ಹೆಸರುಗಳಿಂದ ಕರೆಯುತ್ತಿದ್ದರು ಇವೆಲ್ಲವುಗಳಲ್ಲಿ ಪ್ರಮುಖವಾಗಿ ವೈದಿಕ ಪದ್ಧತಿಯ ಸಂಪ್ರದಾಯ, ಪರಂಪರೆಯನ್ನು ಕಲಿಸಿಕೊಡಲಾಗುತ್ತಿತ್ತು. ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಅಧಿಷ್ಠಾನವೆಂಬ ವಿದ್ಯಾ ಕೇಂದ್ರವಿತ್ತು ಅಲ್ಲಿ ಸಾವಿರಾರು ವಿದ್ವಾಂಸರುಗಳ ಒಂದು ಪಡೆಯೇ ಇತ್ತು ಎಂಬುದು ತಿಳಿದು ಬಂದಿದೆ. ರಾಷ್ಟ್ರಕೂಟರ ಕಾಲದಲ್ಲಿ 500ಕ್ಕೂ ಹೆಚ್ಚು ಚತುರ್ವೇದಿ ಸಮುದಾಯದ ವಿದ್ವಾಂಸರು ಐಹೊಳೆಯಲ್ಲಿ ಇದ್ದರೂ ಎನ್ನುವುದನ್ನು ಸಹ ಗುರುತಿಸಲಾಗಿದೆ. ಹೀಗೆ ಬೆಳಗಾವಿ ಶಿವಮೊಗ್ಗದ ತಾಳಗುಂದಿ ಮೊದಲಾದ ಸ್ಥಳಗಳಲ್ಲಿ ಈ ಗುರುಕುಲಗಳು ಇದ್ದ ಬಗ್ಗೆ ಗುರುತಿಸಲಾಗಿದೆ. ರಾಷ್ಟ್ರಕೂಟರ ಕಾಲದಲ್ಲಿ ಅವಿಭಜಿತ ಬಳ್ಳಾರಿ ಜಿಲ್ಲೆಯಲ್ಲಿ ಕಾರ್ತಿಕೋ ತಪೋವನ ಎಂಬ ಗುರುಕುಲ ಸ್ಥಾಪನೆಯಾಗಿತ್ತು ಎಂದು ವಡ್ಡಾರಾಧನೆಯಲ್ಲಿ ದಾಖಲಿಸಲಾಗಿದೆ. ಮುಂದೆ ಚಾಲುಕ್ಯ ಹೊಯ್ಸಳರ ಕಾಲದಲ್ಲಿಯೂ ಕರ್ನಾಟಕದಲ್ಲಿ ಗುರುಕುಲಗಳು ಮುಂದುವರೆದಿದ್ದವು. ನಂತರ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಹಂಪಿಯಲ್ಲಿ ಗುರುಕುಲ ಸ್ಥಾಪನೆಯಾಗಿತ್ತು. ಹಂಪಿಯಲ್ಲಿದ್ದ ವ್ಯಾಸ ತೀರ್ಥರು ಈ ಗುರುಕುಲವನ್ನು ಸ್ಥಾಪಿಸಿ ಅದಕ್ಕೆ ಲೋಕ ಪಾವನಿ ಗುರುಕುಲ ಎಂದು ಕರೆದಿದ್ದಾರೆ. ಇದು ವಿಶ್ವ ಪಾವನಿ ಅಥವಾ ವಿಶ್ವ ಪಾವನ ಸಂಸ್ಕೃತ ವಿಶ್ವವಿದ್ಯಾಲಯವೆಂದು ಸಹ ಕರೆಯಲಾಗುತ್ತಿದೆ. ಈ ಕುರಿತ ಒಂದಿಷ್ಟು ಮಾಹಿತಿ

ಕ್ರಿಸ್ತಶಕ 5–7ನೇ ಶತಮಾನದಲ್ಲಿ ಬೃಹದ್ದೇಶಿ ಕೃತಿ ರಚನೆಗೊಂಡ ಸ್ಥಳ ಹಂಪಿ. ಅಂದಿನಿಂದ ಇವತ್ತಿನ ಕನ್ನಡ ವಿಶ್ವವಿದ್ಯಾಲಯದವರೆಗೆ ಈ ಪ್ರದೇಶವು ಸಾಹಿತ್ಯಕವಾಗಿ ಮತ್ತು ಶೈಕ್ಷಣಿಕವಾಗಿ ಹಲವು ಆಯಾಮಗಳನ್ನು ಒಳಗೊಳ್ಳುತ್ತ ಬಂದಿದೆ. 12ನೇ ಶತಮಾನದಲ್ಲಿ ಹರಿಹರ ರಾಘವಾಂಕ ಕುಮಾರವ್ಯಾಸ ನಂಜುಂಡ ಕವಿ ಮೊದಲಾದ ಸಾಹಿತಿಗಳು ಕವಿಗಳು ಕಾವ್ಯ ಸಾಹಿತ್ಯ ರಚನೆಯನ್ನು ಮಾಡಿದ್ದರೆ, ನಂತರ ಸುಮಾರು 14–15ನೇ ಶತಮಾನದಲ್ಲಿ ಶ್ರೀ ಪ್ರೌಢದೇವರಾಯರ ಆಡಳಿತದ ಕಾಲಘಟ್ಟದಲ್ಲಿ ಅಪಾರವಾದಂತಹ ಸಾಹಿತ್ಯ, ವಚನ ಸಾಹಿತ್ಯದ ಸಂಗ್ರಹಣೆ ವಿಮರ್ಶೆ ಕಾರ್ಯ ನಡೆಯಿತು. ಈ ಕಾಲಘಟ್ಟದ ನಂತರ ಶ್ರೀಕೃಷ್ಣದೇವರಾಯರ ಆಡಳಿತದಲ್ಲಿ ವ್ಯಾಸತೀರ್ಥರು ಅತ್ಯಂತ ಮಹತ್ವದ ಧಾರ್ಮಿಕ, ಶೈಕ್ಷಣಿಕ ಸಾಮಾಜಿಕ ಕಾರ್ಯಗಳನ್ನು ನೆರವೇರಿಸಿದ್ದಾರೆ. ವಿಶೇಷವಾಗಿ ಹಂಪಿಯಲ್ಲಿ ಹಾಗೂ ವಿಜಯನಗರ ಸಾಮ್ರಾಜ್ಯದಲ್ಲಿ ವೈಷ್ಣವ ಪರಂಪರೆಯನ್ನು ಅತ್ಯಂತ ಉನ್ನತ ಮಟ್ಟಕ್ಕೆ ಎತ್ತರಿಸಿದವರು ಶ್ರೀ ವ್ಯಾಸ ತೀರ್ಥರು. ಶ್ರೀ ವಿರೂಪಾಕ್ಷ ಪ್ರದೇಶವು ಶೈವ – ವೀರಶೈವ ಪರಂಪರೆಯ ಕೇಂದ್ರವಾಗಿದ್ದರೆ, ಯಂತ್ರೋದ್ಧಾರಕ ಪ್ರಾಣದೇವರು ದೇವಸ್ಥಾನ ದಿಂದ ವಿಜಯವಿಠ್ಠಲ ದೇವಸ್ಥಾನದ ಪ್ರದೇಶದವರೆಗೆ ವೈಷ್ಣವ ಪರಂಪರೆಯ ಆರಾಧನೆಯ ಪ್ರದೇಶವಾಗಿತ್ತು. ವಿಜಯನಗರದ ಸುಮಾರು ಐದು ರಾಜರಿಗೆ ರಾಜಗುರುಗಳಾಗಿದ್ದು ಮಾರ್ಗದರ್ಶನ ಮಾಡಿದವರು ಶ್ರೀ ವ್ಯಾಸತೀರ್ಥರು. ಶ್ರೀ ಕೃಷ್ಣದೇವ ರಾಯನಿಗೆ ರಾಜ ಗುರುವಾಗಿ ಮಾರ್ಗದರ್ಶನ ಮಾಡಿದ್ದಕ್ಕಾಗಿ ರಾಯನು ಶ್ರೀ ವ್ಯಾಸತೀರ್ಥರರನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ, ಕನಕಾಭಿಷೇಕವನ್ನು ಮಾಡಿ ಗೌರವಿಸಿದ್ದರಿಂದ ಇವರನ್ನ ವ್ಯಾಸ ರಾಜರು ಎಂದು ಕರೆಯುವ ಪರಂಪರೆ ಬೆಳೆದು ಬಂದಿತು.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Hampi Times E-paper
SCAN AND READ

ಧಾರ್ಮಿಕವಾಗಿ ಮಹತ್ವದ ಮಾರ್ಗದರ್ಶನ ಹಾಗೂ ಕಾರ್ಯಗಳನ್ನು ಮಾಡಿದ ವ್ಯಾಸರಾಯರು, ವೈಧಿಕ ಧರ್ಮದ ಅಸ್ಮಿತೆಗಾಗಿ ಒಂದು ಗುರುಕುಲವನ್ನು ಸ್ಥಾಪಿಸಿ ಆ ಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ವೈದಿಕ ಪರಂಪರೆಯನ್ನು ಪರಿಚಯಿಸಿದವರು.

ಹಂಪಿಯ ತುಂಗಾಭದ್ರ ತಟದಲ್ಲಿ ಲೋಕ ಪಾವನಿ (ಲೋಕ ಪಾವನ) ಗುರುಕುಲ ಅಥವಾ ಸಂಸ್ಕೃತ ವಿಶ್ವವಿದ್ಯಾಲಯವನ್ನು ಮೊದಲ ಬಾರಿಗೆ ಸ್ಥಾಪನೆ ಮಾಡಿದವರು ಶ್ರೀ ವ್ಯಾಸತೀರ್ಥರು. ಸಾವಿರಾರು ವಿದ್ಯಾರ್ಥಿಗಳಿಗೆ ವೈದಿಕ ಪರಂಪರೆಯ ಪರಿಚಯವನ್ನು, ಬೋಧನೆಯನ್ನು ಮಾಡುವ ಮೂಲಕ ವ್ಯಾಸತೀರ್ಥರು ಒಂದು ಹೊಸ ಚರಿತ್ರೆಯನ್ನು ಸೃಷ್ಟಿಸಿದ್ದವರು. ದೇಶದ ವಿವಿಧ ಭಾಗಗಳಿಂದಲೂ ಅಸಂಖ್ಯಾತ ವಿದ್ಯಾರ್ಥಿಗಳು, ಆ ಗುರುಪೀಠಕ್ಕೆ ಆಗಮಿಸಿ ವಿದ್ಯೆಯನ್ನು ಪಡೆದಿದ್ದಾರೆ. ಹಾಗೇನೇ ಹಲವಾರು ವಿದ್ವಾಂಸರು, ಪಂಡಿತರು ಸಹ ಆಗಮಿಸಿ ತಮ್ಮ ಪಾಂಡಿತ್ಯವನ್ನು ವಿದ್ಯಾರ್ಥಿಗಳಿಗೆ ಧಾರೆ ಎರೆದಿದ್ದರು. ತಮ್ಮ ಧಾರ್ಮಿಕ ಸಾಂಸ್ಕೃತಿಕ ಸಾಮಾಜಿಕ ಕಾರ್ಯಗಳ ಜೊತೆಗೆ




## ಗುರು ಪೂರ್ಣಿಮೆ ವಿಶೇಷ

ಶೈಕ್ಷಣಿಕವಾಗಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ಆ ಮೂಲಕ ಶೈಕ್ಷಣಿಕ ಕಾರ್ಯವನ್ನು ಪೂರೈಸಿದವರು.

ಈ ಗುರುಪೀಠ ಅಥವಾ ವಿಶ್ವವಿದ್ಯಾಲಯಕ್ಕೆ ದೇಶದ ವಿವಿಧ ಭಾಗಗಳಿಂದ ವಿದ್ವಾಂಸರು ಆಗಮಿಸಿ, ತಮ್ಮ ವಿದ್ವತ್ತನ್ನು ಸಭೆಗೆ ತೋರಿಸಿ ಕೊಡುತ್ತಿದ್ದರಂತೆ. ವಿದ್ವತ್ ಸಭೆಯಲ್ಲಿ ಗೆದ್ದವರಿಗೆ ಗೌರವಗಳು, ಸನ್ಮಾನಗಳನ್ನು ಮಾಡಿ ಸತ್ಕರಿಸುತ್ತಿದ್ದವರು ವ್ಯಾಸತೀರ್ಥರು. ಒಮ್ಮೆ ಹೀಗೆ ಇರುವಾಗ ಕಳಿಂಗ ದೇಶದ ಬಸವಭಟ್ಟ ಎಂಬ ಮಹಾ ಪಂಡಿತನು ವ್ಯಾಸರಾಜರ ವಿದ್ವತ್ ಸಭೆಗೆ ಆಗಮಿಸಿ 30 ದಿನಗಳ ಕಾಲ ವಾಕ್ಯಾರ್ಥವನ್ನು ನಡೆಸಿ ಕೊನೆಯಲ್ಲಿ ಸೋಲನ್ನು ಅನುಭವಿಸಿದ. ಆಗ ಆ ಬಸವ ಭಟ್ಟನಿಗೆ ಅವಮಾನ ಆಗದ ಹಾಗೇ ಪ್ರೀತಿಯಿಂದ ನೋಡಿಕೊಂಡ ವ್ಯಾಸ ತೀರ್ಥರು ಸಭೆಯಲ್ಲಿ ಅವನ ವಿದ್ವತ್ತನ್ನು ಸಹ ಗೌರವಿಸಿ ಸನ್ಮಾನ ಮಾಡಿದ್ದವರು ಎಂಬುದು ತಿಳಿದು ಬರುತ್ತದೆ. ಸೋತವರನ್ನು ಸಹ ಗೌರವಿಸುವ ವ್ಯಾಸರಾಜರ ಈ ಸಂಸ್ಕೃತಿಯನ್ನು ಕಂಡು ಆ ಬಸವ ಭಟ್ಟ ಅವರಿಗೆ ಶರಣಾಗಿ ತನ್ನ ಬಳಿ ಇದ್ದ ಪಚ್ಚೆ ಲಿಂಗವನ್ನು ವ್ಯಾಸ ತೀರ್ಥರಿಗೆ ಕಾಣಿಕೆಯಾಗಿ ನೀಡಿದನು ಎನ್ನಲಾಗಿದೆ. ಇಂತಹ ವಿದ್ವತ್ ಕಾರ್ಯಗಳು ವ್ಯಾಸತೀರ್ಥರ ಘನತೆ ಗೌರವಗಳನ್ನು ಹೆಚ್ಚಿಸಿದ್ದವು.

ವಾದಿರಾಜರು ಪುರಂದಾಸರು ಮತ್ತು ವ್ಯಾಸ ತೀರ್ಥರು ಒಟ್ಟಿಗೆ ಸೇರಿ ಅನೇಕ ವಿಚಾರಗಳನ್ನು ಚರ್ಚಿಸುತ್ತಿದ್ದರಂತೆ. ಹಂಪಿಯಲ್ಲಿ ಕೇಂದ್ರ ಸ್ಥಾನವಾಗಿದ್ದ ಈ ಗುರುಕುಲವು ಹರಿದ್ವಾರ, ಗಯಾ, ಕಾಶಿ, ಕುಂಭಕೋಣ, ಕಂಚಿ, ಉಡುಪಿ ಮೊದಲಾದ ಪ್ರದೇಶಗಳಲ್ಲಿ ಈ ಗುರುಕುಲದ ಕೇಂದ್ರಗಳನ್ನು ಸ್ಥಾಪಿಸಿ ಆ ಕೇಂದ್ರಗಳ ಮೂಲಕ ಅಲ್ಲಿಯ ವಿದ್ಯಾರ್ಥಿಗಳಿಗೆ ವೈದಿಕ ಶಿಕ್ಷಣವನ್ನು ಕಲ್ಪಿಸಿಕೊಟ್ಟವರು. ವಿಶ್ವ ಪಾವನ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸುಮಾರು 50 ವರ್ಷಗಳ ಕಾಲ ಅದರ ಕುಲಪತಿಗಳಾಗಿ ಕಾರ್ಯಗಳನ್ನು ನಿರ್ವಹಿಸಿದ್ದವರು ವ್ಯಾಸತೀರ್ಥರು. ವಿಶ್ವಪಾವನೆ ಸಂಸ್ಕೃತ ವಿಶ್ವವಿದ್ಯಾಲಯದ ಘಟಿಕೋತ್ಸವದ ಕಾರ್ಯಕ್ರಮಕ್ಕೆ ಅರಸ ಶ್ರೀ ಕೃಷ್ಣದೇವರಾಯರು ವ್ಯಾಸತೀರ್ಥರನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಸ್ವತಃ ಹೆಗಲು ಜೋಡಿಸಿ ಘಟಿಕೋತ್ಸವದ ಕಾರ್ಯಕ್ರಮಕ್ಕೆ ಹೊತ್ತುಕೊಂಡು ಬರುತ್ತಿದ್ದರು ಎಂಬ ಅಭಿಪ್ರಾಯವನ್ನು ಕೆಲವಿದ್ವಾಂಸರು ವ್ಯಕ್ತಪಡಿಸುತ್ತಾರೆ.

ಹಂಪಿಯಲ್ಲಿ ಅಷ್ಟೇ ಅಲ್ಲ ಹಂಪಿಯಿಂದ ಅಸೇತು ಹಿಮಾಚಲದವರೆಗೆ ಎರಡು ಬಾರಿ ಸಂಚಾರ ಮಾಡಿ ಮಾಧ್ವ ಪರಂಪರೆಯನ್ನು ಪ್ರಚಾರ ಮಾಡಿದ ಕೀರ್ತಿ ವ್ಯಾಸತೀರ್ಥರಿಗೆ ಸಲ್ಲುತ್ತದೆ. ವ್ಯಾಸ ತೀರ್ಥರ ಜೊತೆಗೆ ಶ್ರೀ ವಾದಿರಾಜರು ಶ್ರೀನಿವಾಸ ತೀರ್ಥರು ವಿಜಯೇಂದ್ರರು ಅವರ ಜೊತೆ ಇದ್ದವರು. ಸೋಮನಾಥನೆಂಬ ಸಂಸ್ಕೃತ ಕವಿ ತಮಿಳುನಾಡಿನ ಕಂಚಿಯ ಬಳಿ ಇರುವ ಗೋವಿಂದ ತೀರ್ಥಪುರ ಎಂಬ ಅಗ್ರಹಾರದ ಊರಿನವ. ಇವನು ಸಂಸ್ಕೃತದ ಪ್ರಕಾಂಡ ಪಂಡಿತ . ರಾಜಾಧಿರಾಜರಿಂದ ಗೌರವ ಸನ್ಮಾನಗಳಿಗೆ ಒಳಪಟ್ಟಿದ್ದವನು. ಇಂತಹ ಪ್ರಕಾಂಡ ಪಂಡಿತನನ್ನು ವ್ಯಾಸತೀರ್ಥರು ವಿಜಯನಗರ ಸಾಮ್ರಾಜ್ಯಕ್ಕೆ ಬರಮಾಡಿಕೊಂಡು ತಮ್ಮ ವಿದ್ವತ್ ಸಭೆಯಲ್ಲಿ ಇವನು ಶತಾವಧಾನ ವಿದ್ವತ್ತಿಗೆ ಅವಕಾಶವನ್ನು ಮಾಡಿಕೊಟ್ಟಿರುತ್ತಾರೆ. ಸೋಮನಾಥ ಕವಿಯ ಶತಾವಧಾನ ಶಕ್ತಿಗೆ ನಿಬ್ಬೆರಗಾದ ವ್ಯಾಸ ತೀರ್ಥರು ಅವನನ್ನು ಸಭೆಯಲ್ಲಿ ಸನ್ಮಾನಿಸಿದರಂತೆ. ಇಂತಹ ಅನೇಕ ಪಂಡಿತರಿಗೆ ಇವರ ಲೋಕ ಪಾವನ ವಿಶ್ವವಿದ್ಯಾಲಯವು ವಿದ್ವತ್ತಿನ ಬೃಹತ್ ವೇದಿಕೆಯಾಗಿತ್ತು ಎಂದು ವಿದ್ವಾಂಸರು ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ.

ವ್ಯಾಸತೀರ್ಥರು ಸಂಸ್ಕೃತ ಮತ್ತು ಕನ್ನಡ ಎರಡು ಭಾಷೆಗಳಲ್ಲಿ ಪಂಡಿತರಾಗಿದ್ದರು. ಹೀಗಾಗಿ ಎರಡು ಭಾಷೆಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಅವರು ಸಂಸ್ಕೃತದಲ್ಲಿ ರಚಿಸಿರುವ ಕೃತಿಗಳೆಂದರೆ ನ್ಯಾಯಮತ, ತರ್ಕ ತಾಂಡವ, ಚಂದ್ರಿಕಾ ಈ ಗ್ರಂಥಗಳು ವ್ಯಾಸತ್ರಯ ಗ್ರಂಥಗಳೆಂದೇ ಪ್ರಸಿದ್ಧಿ ಪಡೆದಿವೆ. ಮಾಯವಾದ ಖಂಡನೆ ಟೀಕಾ ಮಂದಾರ ಮಂಜರಿ, ಉಪಾದಿ ಖಂಡನೆ ಟೀಕಾ ಮಂದಾರ ಮಂಜರಿ, ಪ್ರಪಂಚ ಮಿಥ್ಯಾತ್ವಾನುಮಾನ ಟೀಕೆ ಮಂದರ ಮಂಜರಿ, ಮೊದಲಾದ ಐದು ಕೃತಿಗಳನ್ನು ಸಂಸ್ಕೃತದಲ್ಲಿ ರಚಿಸಿರುವರು. ಇವರು ಕನ್ನಡದಲ್ಲಿ ಕೀರ್ತನೆಗಳನ್ನು ಸಹ ರಚನೆ ಮಾಡಿದ್ದಾರೆ ಎನ್ನಲಾಗಿದೆ. ದೇವಸ್ಥಾನದಲ್ಲಿ ಪೂಜೆ ಮಾಡುವ ಸಮಯದಲ್ಲಿ ಹಾಗೂ ಭಜನೆ ಮಾಡುವ ಸಂದರ್ಭಗಳಲ್ಲಿ ಕನ್ನಡದಲ್ಲಿ ದೇವರ ನಾಮಗಳನ್ನು ಹೇಳಿಸುವ ಸಂಪ್ರದಾಯವನ್ನು ತಮ್ಮ ಮಠದಲ್ಲಿ ಮೊಟ್ಟಮೊದಲ ಬಾರಿಗೆ ಜಾರಿಗೆ ತಂದವರು ಶ್ರೀ ವ್ಯಾಸತೀರ್ಥರು.





## ಮಂಟಪವೇ ಲೋಕ ಪಾವನಿ ಮಠ

ಯಂತ್ರೋದ್ಧಾರಕ ಆಂಜನೇಯನ ದೇವಸ್ಥಾನದಿಂದ ವಿಜಯವಿಠಲ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ನರಸಿಂಹ ದೇವಸ್ಥಾನವಿದೆ. ಈ ದೇವಸ್ಥಾನದ ಮೂಲಕ ಹೋದರೆ ಬಲಭಾಗದಲ್ಲಿ ಎತ್ತರದ ಮಂಟಪವಿದೆ. ಈ ಮಂಟಪವೇ ವಿಶ್ವ ಪಾವನಿ ಅಥವಾ ವಿಶ್ವಪಾವನ ಮಠವೆಂದು ಅಥವಾ ವಿಶ್ವಪಾವನ ಗುರುಕುಲ ಎಂದು ಕರೆಯುತ್ತಿದ್ದಾರೆ. ಇದನ್ನು ರಾಜ ತಮ್ಮರಾಯ ಎಂಬವನು ವ್ಯಾಸರಾಯರಿಗಾಗಿ ಕಟ್ಟಿಸಿ ಕೊಟ್ಟಿದ್ದಾನೆಂದು ಹೇಳುತ್ತಾರೆ. ಈಗಲೂ ಸುಸ್ಥಿತಿಯಲ್ಲಿರುವ ಈ ಮಂಟಪ ಆಕರ್ಷಿಸುತ್ತದೆ. ಈ ಮಂಟಪದ ಹಿಂಭಾಗದಲ್ಲಿ ಗುಡ್ಡಕ್ಕೆ ಹೊಂದಿಕೊಂಡು ವಿಶಾಲವಾದ ಏಕಶಿಲಾ ಹಾಸು ಬಂಡೆ ಇದ್ದು, ಈ ಬಂಡೆಯ ಮೇಲೆ ವಿದ್ಯಾರ್ಥಿಗಳ ಪಾಠ ಪ್ರವಚನಗಳು ನಡೆಯುತ್ತಿರಬಹುದೆಂದು ಊಹಿಸಲಾಗಿದೆ. ಈ ವಿಶಾಲ ಬಂಡೆಯ ಅಂಚಿನಲ್ಲಿ ಒಂದು ದೀಪಸ್ತಂಭವಿದೆ. ಇದನ್ನು ರಾತ್ರಿಯ ಸಮಯದಲ್ಲಿ ಬೆಳಕಿಗಾಗಿ ನಿರ್ಮಿಸಿರಬಹುದೆಂದು ಊಹಿಸಲಾಗುತ್ತಿದೆ.

ಮಂಟಪದ ಕೆಳಗಡೆ ನದಿ ಹರಿಯುತ್ತಿದೆ. ಈ ಮಂಟಪದಲ್ಲಿ ಕುಳಿತುಕೊಂಡರೆ ಎದುರಿಗೆ ವಿರೂಪಾಕ್ಷ ದೇವಸ್ಥಾನ ಮಾತಂಗ ಪರ್ವತ ಹಾಗೂ ಋಷ್ಯಶೃಂಗ ಪರ್ವತ, ಆಂಜನಾದ್ರಿ ಪರ್ವತ ಮೊದಲಾದವುಗಳು ಕಣ್ಣೆದುರೆ ಕಾಣುವಂತಿವೆ.ಇಂಥಹ ಸುಂದರವಾದ ಸ್ಥಳದಲ್ಲಿ ಇದನ್ನು ನಿರ್ಮಿಸಲಾಗಿದೆ. ಹಂಪಿಯಲ್ಲಿ ವ್ಯಾಸತೀರ್ಥರಿಂದ ಸ್ಥಾಪಿಸಲ್ಪಟ್ಟ ಲೋಕ ಪಾವನಿ ಅಥವಾ ಸಂಸ್ಕೃತ ವಿಶ್ವವಿದ್ಯಾಲಯವು ಹಂಪಿಯ ಹಾಗೂ ವಿಜಯನಗರ ಸಾಮ್ರಾಜ್ಯದ ಪ್ರತಿಷ್ಠೆಯನ್ನು ಹೆಚ್ಚಿಸಿತ್ತು ಎಂದರೆ ತಪ್ಪಾಗಲಾರದು. ಸಾಹಿತ್ಯ ಕೃತಿಗಳಲ್ಲಿ ಮತ್ತು ವಿದ್ವಾಂಸರ ವಿಚಾರಗಳಲ್ಲಿ ಚರ್ಚೆಗಳಲ್ಲಿ ಈ ವಿಶ್ವವಿದ್ಯಾಲಯ ಗಮನ ಸೆಳೆಯುತ್ತದೆ. ಈ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆದು ಒಂದು ನಿರ್ದಿಷ್ಟವಾದ ವಿಚಾರಗಳನ್ನು ಈ ಲೋಕ ಪಾವನಿ ಮಠ ಅಥವಾ ಸಂಸ್ಕೃತ ವಿಶ್ವವಿದ್ಯಾಲಯದ ಬಗ್ಗೆ ಬೆಳಕು ಚೆಲ್ಲುವ ಅವಶ್ಯಕತೆ.

ಪ್ರೀತ ವ್ಯಾಸರಾಯರು ಕ್ರಿಸ್ತಶಕ 1447 ರಿಂದ ಕ್ರಿಸ್ತಶಕ 1539 ರವರೆಗೆ ಅಂದರೆ ಒಟ್ಟು 92 ವರ್ಷಗಳ ಕಾಲ ತಮ್ಮ ಸುಧೀರ್ಘ ಸಾರ್ಥಕ ಜೀವನವನ್ನು ನಡೆಸಿದ್ದವರು ವ್ಯಾಸ ತೀರ್ಥರು. ಹಂಪಿಯ ತುಂಗಭದ್ರಾ ನಡುಗಡ್ಡೆಯಲ್ಲಿ ತಮ್ಮ ಕೊನೆಯುಸಿರನ್ನು ಎಳೆದವರು. ಪ್ರತಿ ವರ್ಷ ಶ್ರೀವ್ಯಾಸರಾಯರ ಆರಾಧನೆಯನ್ನು ನವವೃಂದಾವನದಲ್ಲಿ ಆಚರಿಸಲಾಗುತ್ತಿದೆ.



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA